

ಗಟರ್ ಜೋಡಣೆ ದಿನ ಕಾಳಯ್ಯ ಅಧಿಕಾರಿಗೆ ನೀಡಿದ ಸಹಕಾರ ಮೆಚ್ಚುವಂತದ್ದಾಗಿತ್ತು. ಆತನ ಸ್ವಭಾವ ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವ ಮನೋಭಾವವನ್ನು ವ್ಯಕ್ತಪಡಿಸುವಂತಿತ್ತು.

ಸಾಗಿಸುವ ಪೈಪ್‌ಗಳನ್ನು 'ಗಟರ್ಸ್'ಎಂದು ಕರೆಯಲಾಗುತ್ತಿದೆ. ಸಾಮಾನ್ಯವಾಗಿ 6"ನಷ್ಟು ದೊಡ್ಡದಿರುವ ಪಿ.ವಿ.ಸಿ. ಪೈಪನ್ನು ಮಧ್ಯಕ್ಕೆ ಸಮಭಾಗವಿರುವಂತೆ ಸೀಳಿದರು. ಈ ಕಾಲುವೆಯಾಕಾರದ ಪಿ.ವಿ.ಸಿ. ಪೈಪನ್ನು ಮನೆಯ ಸೂರಿನ ಹಂಚಿಗೆ ವಿಶೇಷ ಬಗೆಯ 'ಕ್ಲಾಂಪ್'ಗಳನ್ನು (ಕಬ್ಬಿಣದಿಂದ ಮಾಡಿದ ಕೊಂಡಿ)ಬಳಸಿ ಬಿಗಿಯಲಾಯಿತು. ಈ 'ಗಟರ್ಸ್'ಗಳು ಟ್ಯಾಂಕಿನ ಕಡೆಗೆ ಸ್ವಲ್ಪ ಇಳಿಜಾರು ಇರುವಂತೆ ನೋಡಿಕೊಳ್ಳಲಾಯಿತು.

ಗಟರ್ಸ್ ಜೋಡಣೆ ಪ್ರಗತಿಯಲ್ಲಿದೆ.



ಕಾಳಯ್ಯನ ಮನೆ ಸೂರಿಗೆ ಜೋಡಿಸಿದ ಗಟರ್ಸ್‌ಗಳನ್ನು ನನ್ನೂರಿನ ಅನೇಕ ಜನ ಬಂದು ನೋಡಿದ್ದು ನನ್ನ ಗಮನ ಸೆಳೆಯಿತು.




ಕಾಳಯ್ಯನ ಮನೆ ಒಳಗೆ ತೊಟ್ಟಿಯ ಸೂರಿಗೆ ಅಳವಡಿಸಿರುವ ಮಳೆನೀರು ಸಂಗ್ರಹದ ಗಟರ್ಸ್‌ಗಳ ಚಿತ್ರ

ಇದರಿಂದ ಸೂರಿನಿಂದ ಬಿದ್ದ ಮಳೆ ನೀರು ಸಲೀಸಾಗಿ ಫಿಲ್ಟರ್ ಮೂಲಕ ಟ್ಯಾಂಕಿಗೆ ಹರಿದು ಬರುವಂತಾಯಿತು. ಸೂರು ಉದ್ದವಿರುವ ಕಡೆ ಮತ್ತೊಂದು ಪಿ.ವಿ.ಸಿ. ಪೈಪ್‌ನ್ನು ಸೇರಿಸಿದರು. ಈ ಜೋಡಣೆ ಜಾಗದಲ್ಲಿ ನೀರು ಸೋರದಂತಿರಲು ಅಂಟನ್ನು ಹಾಕಿ ಅಂಟಿಸಿದರು.

ಅಂದು ಮಧ್ಯಾಹ್ನದ ವೇಳೆಗೆ ಶಾಲೆ ಎರಡೂ ಕಡೆಯ ಛಾವಣಿಯ ಸೂರಿಗೆ ಗಟರ್ಸ್‌ಗಳನ್ನು ಕಟ್ಟಿ ಮುಗಿಸಿದರು.

## ನೀರು ಶೋಧಕ ಜಾಲರಿ ಅಳವಡಿಕೆ.

ಸೂರಿನಿಂದ ಬಿದ್ದ ಮಳೆ ನೀರು ಗೋಲಾಕಾರದ ಅಥವಾ ಉಬ್ಬಿದ ಶೋಧಕ ಜಾಲರಿ ಮೇಲೆ ನೀರು ಬೀಳುವಂತೆ ಶೋಧಕ ಜಾಲರಿ (ಫಿಲ್ಟರ್) ಜೋಡಿಸಿದರು. ಇದರಿಂದ ಕಸಕಡ್ಡಿಯಿಂದ ಮುಕ್ತವಾದ ನೀರು ಟ್ಯಾಂಕು ಸೇರಲು ಅವಕಾಶವಾಯಿತು.

ಈ ಶೋಧಕ ಜಾಲರಿಗೆ ಹಾಯ್ದು ಬರುವ ನೀರು ಎಲೆ ಕಸಕಡ್ಡಿಗಳಿಂದ ಮುಕ್ತವಾಗಿ ಟ್ಯಾಂಕ್ ಸೇರುತ್ತಿತ್ತು. ಫಿಲ್ಟರ್ ಮೇಲೆ ಅತಿಯಾಗಿ ಶೇಖರಣೆಯಾಗುವ ಕಸವನ್ನು ತೆಗೆದು ಹಾಕಲು ಅವಕಾಶವಾಯಿತು.

ಟ್ಯಾಂಕಿನಲ್ಲಿರುವ ನೀರಿನಲ್ಲಿ ಅತಿ ಸೂಕ್ಷ್ಮರೀತಿಯ ಧೂಳಿನ ಕಣ ಇತ್ಯಾದಿಗಳು ಟ್ಯಾಂಕಿನ ತಳಭಾಗದಲ್ಲಿ ಶೇಖರವಾಗುತ್ತದೆ. ಟ್ಯಾಂಕಿನಲ್ಲಿ ನೀರು ಕಡಿಮೆಯಾದಾಗ ಹೊರಭಾಗದಿಂದ ಕೊಟ್ಟಿರುವ ಪೈಪಿನ ಮುಚ್ಚಳ ತೆಗೆದು ಧೂಳಿನ ಬಗ್ಗಡವನ್ನು ಹೊರಹಾಕಲು ಅವಕಾಶವಾಯಿತು.




ತಾರಸಿ ಮನೆಯೊಂದರ ಛಾವಣಿಯನ್ನು ಮಳೆಗೆ ಮುನ್ನ ಸ್ವಚ್ಛ ಪಡಿಸುವುದು ಅತ್ಯವಶ್ಯಕ.




ಶಾಲೆಗೆ ಅಳವಡಿಸಿದ ಗಟರ್ಸ್‌ನಲ್ಲಿ ಎರಡು ಛಾವಣಿಯಲ್ಲಿ ಸೇರಿದ ಕಸ ತೆಗೆಯಲು ರೈತನೊಬ್ಬ ಸ್ವಪ್ರೇರಣೆಯಿಂದ ಮುಂದಾದ

ಒಂದು ಎಚ್ಚರಿಕೆ ಏನೆಂದರೆ ನಮ್ಮ ಛಾವಣಿ ಮೇಲೆ ಹಾಗೂ ಗಟರ್ಸ್‌ಗಳಲ್ಲಿ ಮೊದಲ ಮಳೆಗೆ ಮುನ್ನ ಸೇರಿರುವ ಕಸಕಡ್ಡಿ ಮೊದಲಾದವುಗಳನ್ನು ಸ್ವಚ್ಛ ಮಾಡಬೇಕು. ಇದರಿಂದ ಬಹಳ ಕಾಲದಿಂದ ಛಾವಣಿ ಮೇಲೆ, ಮತ್ತು ಗಟರ್ಸ್‌ಗಳಲ್ಲಿ ಸಂಗ್ರಹವಾಗಿದ್ದ ಕಸ ನೀರಿನಲ್ಲಿ ಬೆರೆಯುವುದನ್ನು ತಡೆಯಬಹುದು. ನೀರು ಶುದ್ಧವಾಗಿರುತ್ತದೆ. ಮತ್ತೊಂದು ಕ್ರಮವೆಂದರೆ ಮಳೆಗಾಲಕ್ಕಿಂತ ಮುಂಚೆ ಟ್ಯಾಂಕನ್ನು ಶುದ್ಧಗೊಳಿಸಿದಲ್ಲಿ ನೀರಿನ ಶುಚಿತ್ವವನ್ನು ಕಾಪಾಡಬಹುದು.

ಚಿತ್ರನೋಡಿ.(ಪುಟ 189) ಶೋಧಕ ಜಾಲರಿ ಕೆಳಭಾಗಕ್ಕೆ ಒಂದು ಉದ್ದವಾಗಿರುವ ಪೈಪಿದೆ. ಮೊದಲ ಮಳೆ ಬಂದಾಗ ಛಾವಣಿ ಮೇಲಿರುವ ಧೂಳು, ಸಣ್ಣಕಸ ಇತ್ಯಾದಿ ಹರಿದು ಈ ಶೋಧಕಜಾಲರಿ ಮೂಲಕ ಈ ಪೈಪ್‌ಗೆ ಬರುತ್ತದೆ. ಇದು ನೀರಿನಿಂದ ತುಂಬಿದ ನಂತರ ಉಳಿಕೆ ನೀರು ಟ್ಯಾಂಕಿನ ಕಡೆಗೆ ಹೋಗುತ್ತದೆ. ನಂತರ ನಾವು ಈ ಪೈಪ್‌ತುದಿಯಲ್ಲಿರುವ ಮುಚ್ಚಳ ತೆಗೆದರೆ ಅದರಲ್ಲಿ ಶೇಖರವಾಗಿರುವ ಧೂಳಿನಿಂದ ಕೂಡಿದ ನೀರು ಹೊರಚೆಲ್ಲಬೇಕು. ನಂತರ ಮುಚ್ಚಳ ಹಾಕಬೇಕು.

## 11ನೇ ದಿನ

ಈ ದಿನ ಕಾಳಯ್ಯನ ಮನೆಗೆ 'ಗಟರ್ಸ್'ಜೋಡಣೆ ಕೆಲಸವನ್ನು ಪ್ರಾರಂಭಿಸಿದರು. ಕಾಳಯ್ಯನ ಮನೆ ನಾಡು ಹಂಚಿನ ಮನೆ. ಇದು ಮಳೆ ನೀರು ಸಂಗ್ರಹದ ಕಾರ್ಯಕ್ಕೆ ಸ್ವಲ್ಪ ಸವಾಲನ್ನೇ ನೀಡಿತು ಎನ್ನಬಹುದು. ಮೊದಲೇ ತಿಳಿಸಿದಂತೆ ಮನೆ ಒಳಗಿನ ತೊಟ್ಟಿಯಲ್ಲಿ ಬೀಳುವ ಮಳೆನೀರನ್ನು ಮಾತ್ರ ಸಂಗ್ರಹಿಸಲು ಯೋಜಿಸಲಾಯಿತು. ಕಾರಣ ಮನೆಯ ಸುತ್ತಲಿನ ಸೂರು ತುಂಬಾ ಅಂಕುಡೊಂಕಾಗಿತ್ತು. ಇದಕ್ಕೆ ನೇರವಾಗಿದ್ದ ಪಿ.ವಿ.ಸಿ. ಪೈಪಿನ 'ಗಟರ್ಸ್' ಬಳಸಲು ಸಾಧ್ಯವಿರಲಿಲ್ಲ.



ಪರಸ್ಪರ ಚರ್ಚೆಯಲ್ಲಿ ತೊಡಗಿರುವ ಅಧಿಕಾರಿಗಳು, ಗಾರೆ ಕೆಲಸದವರು ಮತ್ತು ಊರಿನ ಕೆಲವರು.

ಅಲ್ಲದೆ ಇಡೀ ಮನೆಯನ್ನು 2ಅಡಿಯಷ್ಟು ದಪ್ಪವಾಗಿರುವ ಮಣ್ಣಿನಿಂದ ಕಟ್ಟಿದ್ದಾರೆ. ದೊಡ್ಡಮನೆ. ಇಂತಹ ಮಣ್ಣಿನ ಗೋಡೆಗೆ 'ಗಟರ್ಸ್' ಜೋಡಿಸುವುದು ಪ್ಲಂಬರ್ಸ್‌ಗೆ ಒಂದು ವಿಶಿಷ್ಠ ಅನುಭವ ಆಯಿತು.

ಮನೆಯ ತೊಟ್ಟಿಗೆ ತಗಡಿನಿಂದ ಮಾಡಿದ ವಿಶೇಷವಾದ 'ಗಟರ್ಸ್" ಬಳಸಲಾಯಿತು. ಏಕೆಂದರೆ ತೊಟ್ಟಿಯ ಬಾಯಿ 3¾×3¾ಅಡಿ ಅಗಲದ ಚೌಕಾಕಾರದಲ್ಲಿತ್ತು. ಮಳೆ ಜೋರಾಗಿ ಬಂದಾಗ ಮತ್ತು ನಿಧಾನ ಗತಿಯಲ್ಲಿ ಬಂದಾಗ ನೀರು ಬೀಳುವ ಅಂತರ ಹೆಚ್ಚಾಗುವುದು ಮತ್ತು ಕಡಿಮೆಯಾಗುವುದು ಆಗುತ್ತಿತ್ತು. ಇದಕ್ಕಾಗಿ ಸಾಕಷ್ಟು ಅಗಲವಾದ 1ಅಡಿ ಅಗಲದ ತಗಡಿನ 'ಗಟರ್ಸ್'ನ್ನು ಮಾಡಿ ಜೋಡಣೆ ಮಾಡಿದರು.

ಚಿತ್ರದಲ್ಲಿರುವಂತೆ (ಪುಟ 191) ಗಟರ್‌ನಲ್ಲಿ ಬೀಳುವ ಮಳೆನೀರಿನ ಒತ್ತಡ ತಡೆಯಲು ಅನುಕೂಲವಾಗುವಂತ ಗಟರ್‌ಗಳಿಗೆ ಹಲವಾರು ಕಬ್ಬಿಣದ ಕೊಂಡಿಗಳನ್ನು ಜೋಡಿಸಲಾಯಿತು. ನಂತರ ಇವುಗಳನ್ನು ತೊಟ್ಟಿ ಸುತ್ತಲು ಇರುವ ಮರಗಳಿಗೆ ಮೊಳೆಗಳನ್ನು ಹೊಡೆದು ಬಿಗಿಯಲಾಯಿತು. ತೊಟ್ಟಿಗೆ ಜೋಡಿಸಿದ ಗಟರ್‌ಗೆ ಬಿದ್ದ ಮಳೆ ನೀರು ನಂತರ ಪೈಪು ಮೂಲಕ ಹೊರಭಾಗದಲ್ಲಿರುವ ಟ್ಯಾಂಕಿಗೆ ಹೋಗುವಂತೆ ಮಾಡಿದರು.

ಶಾಲೆಯಲ್ಲಿ ಅಳವಡಿಸಿದ ನೀರು ಶೋಧಕ ಜಾಲರಿಯ ಮಾದರಿಯನ್ನು ಕಾಳಯ್ಯನ ಮನೆಗೂ ಅಳವಡಿಸಲಾಯಿತು.



ಸಂಗ್ರಹಿಸಿದ ಮಳೆ ನೀರು ಕೈತೋಟದ ಬಳಕೆಗೆ, ಮನೆ ಸ್ವಚ್ಛ ಮಾಡಲು, ವಾಹನ ತೊಳೆಯಲು ಎಲ್ಲದಕ್ಕೂ ಬಳಸಿಕೊಳ್ಳಬಹುದು.

## 12ನೇ ದಿನ

ಇಲ್ಲಿಗೆ ಭಾವಣಿ ಮಳೆನೀರಿನ ಕಾರ್ಯ ಅಂತಿಮ ಘಟ್ಟಕ್ಕೆ ಬಂತು. ಟ್ಯಾಂಕಿನ ಕಟ್ಟಡಗಳಿಗೆ ಬಣ್ಣ ಬಳಿಯಲಾಯಿತು.

ಟ್ಯಾಂಕಿನ ಮೇಲೆ ಸಹಕಾರ ನೀಡಿದ ಸಂಸ್ಥೆ, ಟ್ಯಾಂಕಿನ ನೀರು ಸಂಗ್ರಹಣಾ ಸಾಮರ್ಥ್ಯ ಇತ್ಯಾದಿ ವಿವರಗಳನ್ನು ಬರೆಯಲಾಯಿತು. ಅಲ್ಲಿಗೆ ಭಾವಣಿ ಮಳೆ ನೀರು ಸಂಗ್ರಹದ ಎಲ್ಲಾ ಚಟುವಟಿಕೆಗಳು ಮುಗಿದವು.

ಇದರ ಜೊತೆಗೆ ಊರಿನ ಅನೇಕ ಜನರ ಮನಪರಿವರ್ತನೆ ಆದದ್ದು ನನಗೆ ಇದಕ್ಕಿಂತ ಹೆಚ್ಚು ಮುಖ್ಯವಾದ ಸಂಗತಿ ಎನಿಸಿತು. ಊರೊಟ್ಟಿನ ಕೆಲಸ ಸಾಮುದಾಯಿಕ ಕೆಲಸಗಳೆಂದರೆ ಮೂಗು ಮುರಿಯುತ್ತಿದ್ದ ಜನ ಅಂತಹ ಕೆಲಸಗಳಲ್ಲಿ ಈಗ ಆಸಕ್ತಿ ವಹಿಸತೊಡಗಿದರು.

ಶಾಲೆಯ ಶಿಕ್ಷಣ ಸಮಿತಿಯ ಅಧ್ಯಕ್ಷರು ತಮ್ಮ ನೇತೃತ್ವದಲ್ಲಿ ಶಾಲೆಯಲ್ಲಿ ನಡೆದ ಸಾಧನೆ ಬಗ್ಗೆ ಉತ್ಸಾಹದಿಂದ ಮಾತನಾಡಲು ತೊಡಗಿದರು. ಅಷ್ಟೆ ಅಲ್ಲ,

ಊರಿನ ಯುವಕರ ಸಹಾಯ ಪಡೆದು ಶಾಲೆಯ ಮುಂದೆ ಗಿಡಮರಗಳನ್ನು ನೆಟ್ಟರು. ತೆಂಗಿನ ಗಿಡ ತರಿಸಿ ನೆಟ್ಟರು. ಕಾಲುನಡಿಗೆಯ ದಾರಿ ಮಾಡಿದರು. ದಾರಿಯ ಸುತ್ತಾ ಅಂದವಾಗಿ ಇಟ್ಟಿಗೆ ನೆಡಲಾಯಿತು.

ಇಷ್ಟು ವರ್ಷಗಳಾದರೂ ಶಾಲೆಗೆ ವಿದ್ಯುತ್ ಸೌಕರ್ಯವಿರಲಿಲ್ಲ. ಇದರ ಕುರಿತು ನನ್ನೊಡನೆ ಪ್ರಸ್ತಾಪಮಾಡಿದರು. ನಾವು ಇಬ್ಬರು ಸೇರಿ ಅರ್ಜಿ ಬರೆದು ಜಿಲ್ಲಾ ಪಂಚಾಯಿತಿ ಸದಸ್ಯರ ನೆರವು ಪಡೆದು ಇಲಾಖೆಗೆ ಅರ್ಜಿ ಸಲ್ಲಿಸಿದೆವು.

ಊರಿನಲ್ಲಿ ಶಾಲೆಯಿದ್ದರೂ ಎಷ್ಟೂ ಮಕ್ಕಳು ಶಾಲೆಗೆ ಬರುತ್ತಿರಲಿಲ್ಲ. ದನ, ಕುರಿ ಮೇಯಿಸಲು ಹೋಗುತ್ತಿದ್ದರು. ಅಂತಹ ಮಕ್ಕಳ ಪೋಷಕರೊಡನೆ ನಾವಿಬ್ಬರು ಹೋಗಿ ಪದೇ ಪದೇ ಮಾತನಾಡತೊಡಗಿದೆವು. ಇದರಿಂದ ಒಂದಿಬ್ಬರು ಮಕ್ಕಳು ಶಾಲೆಗೆ ಹೊಸದಾಗಿ ಸೇರ್ಪಡೆಯಾದರು. ಇನ್ನು ಕೆಲವು ಮಕ್ಕಳು ಶಾಲೆಗೆ ಸೇರುವ ನಿರೀಕ್ಷೆ ಇದೆ ಎಂದು ನಮಗೆ ಖಚಿತವಾಗಿದೆ.



ಮಳೆಯ ಹನಿಯನ್ನು ದೂರವಿಡುವ ಕಾಲ ಇದಲ್ಲ. ಒಂದೊಂದು ಮಳೆ ಹನಿಯು ಅಮೂಲ್ಯ.

ಇತ್ತೀಚೆಗೆ ನಮ್ಮ ಊರಿಗೆ ಆಗಾಗ್ಗೆ ದೂರದ ನಗರ ಮತ್ತು ಜಿಲ್ಲೆಗಳಿಂದ ಜನ ಬರುತ್ತಿದ್ದಾರೆ. ಊರಿನ ಶಾಲೆ ಮತ್ತು ಕಾಳಯ್ಯನ ಮನೆಯಲ್ಲಿ ನಿರ್ಮಿತವಾಗಿರುವ ಛಾವಣಿ ಮಳೆ ನೀರು ಸಂಗ್ರಹಣದ ಕಾರ್ಯ ಇಂತಹವರ ಗಮನ ಸೆಳೆದಿದೆ. ಕಾಳಯ್ಯ ಹೀಗೆ ಹೊರಗಿನಿಂದ ಬಂದ ಜನರಿಗೆ ಈಗ ನಿರ್ಗಳವಾಗಿ ಮಳೆ ನೀರು ಸಂಗ್ರಹದ ಉಪಯೋಗದ ಬಗ್ಗೆ ಮಾತನಾಡುತ್ತಾರೆ. ಶಾಲೆ ಶಿಕ್ಷಕರು ಶಾಲೆಯ ಆವರಣದಲ್ಲಿ ಟ್ಯಾಂಕಿನ ನೀರಿನಿಂದಾಗಿ ಅಲ್ಲಲ್ಲಿ ಹುಲುಸಾಗಿ ಬೆಳೆದಿರುವ ಹೂ ಮತ್ತು ಹಣ್ಣಿನ ಗಿಡಗಳ ಬಗ್ಗೆ ಮಾತನಾಡುತ್ತಾರೆ. ಇದಕ್ಕೆ ಕಾರಣವಾದ ರಾಜ್ಯ ಸಂಪನ್ಮೂಲ ಕೇಂದ್ರದ ಕೊಡುಗೆಯನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

ನನ್ನ ಊರಿನ ಜನ ನಿಧಾನವಾಗಿಯಾದರೂ ಮಳೆ ನೀರಿನ ಉಪಯೋಗದ ಬಗ್ಗೆ ಆಸಕ್ತಿ ಮತ್ತು ನಂಬಿಕೆ ಬೆಳೆಸಿಕೊಳ್ಳುತ್ತಿದ್ದಾರೆ. ನಿರಂತರ ಶಿಕ್ಷಣ ಕೇಂದ್ರದಲ್ಲಿ ಸೇರುವ ಕೆಲವರು ಇದರ ಬಗ್ಗೆ ಪ್ರಸ್ತಾಪ ತೆಗೆಯುತ್ತಾರೆ. ನಾನು ಇದರ ಸದುಪಯೋಗ ಪಡೆದು ನನ್ನಲ್ಲಿರುವ ಎಲ್ಲ ಮಾಹಿತಿಗಳನ್ನು ಅವರಿಗೆ ಸ್ವಾರಸ್ಯವಾಗಿ ಹೇಳಲು ಪ್ರಯತ್ನಿಸುತ್ತಿದ್ದೇನೆ. ರಾಷ್ಟ್ರದ ಹಲವು ಕಡೆ ಮಳೆನೀರನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳುತ್ತಾರೆ ಎನ್ನುವುದನ್ನು ಸಚಿತ್ರವಾಗಿ ಹೇಳಲು ಪ್ರಯತ್ನಿಸುತ್ತಿದ್ದೇನೆ. ಜನ ಆಸಕ್ತಿಯಿಂದ ಕೇಳುವುದು ಮಾತ್ರವಲ್ಲ ಪ್ರಶ್ನೆಗಳನ್ನು ಹಾಕುತ್ತಿದ್ದಾರೆ.

## ಕೆಲವು ಎಚ್ಚರಿಕೆಗಳು

ಹೌದು ಮಳೆನೀರು ಬಳಸಿಕೊಳ್ಳುವಾಗ ನಾವು ಕೆಲವು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆಗ ಗರಿಷ್ಠ ಪ್ರಮಾಣದ ಉಪಯೋಗ ಪಡೆದುಕೊಳ್ಳಬಹುದು. ಇವುಗಳಲ್ಲಿ ಮುಖ್ಯವಾಗಿ ಛಾವಣಿ ಮೇಲುಭಾಗದ ಸ್ವಚ್ಛತೆ ಮತ್ತು ಟ್ಯಾಂಕಿನ ಒಳಭಾಗದ ಸ್ವಚ್ಛತೆ ಮುಖ್ಯವಾದದ್ದು.

## ಛಾವಣಿ ಸ್ವಚ್ಛತೆ

◆ ಮೇಲ್ಛಾವಣಿಯನ್ನು ಆದಷ್ಟು ಶುಚಿಯಾಗಿಡಬೇಕು. ಮೊದಲ ಮಳೆ ಪ್ರಾರಂಭವಾದಾಗ ಛಾವಣಿಯನ್ನು ಸ್ವಚ್ಛಗೊಳಿಸುವುದನ್ನು ಮರೆಯಬೇಡಿ.

◆ ತಾರಸಿ ಮನೆಯಾಗಿದ್ದರೆ ಛಾವಣಿ ಮೇಲೆ ಪ್ರಾಣಿ ಸಾಕುವುದು, ಕಬ್ಬಿಣದ ವಸ್ತುಗಳನ್ನು ಶೇಖರಿಸಿಡುವುದನ್ನು ಮಾಡಬೇಡಿ. ಇದರಿಂದ ನೀರಿನ ಗುಣಮಟ್ಟ ಕೆಡುತ್ತದೆ.

◆ ಗೊಬ್ಬರದ ಅಥವಾ ರಾಸಾಯನಿಕ ವಸ್ತುಗಳನ್ನು ತುಂಬಲು ಬಳಸಿದ ಚೀಲ ಇತ್ಯಾದಿಗಳನ್ನು ಛಾವಣಿ ಮೇಲೆ ಎಸೆಯಬೇಡಿ.

## ಟ್ಯಾಂಕಿನ ಸ್ವಚ್ಛತೆ

◆ ಟ್ಯಾಂಕಿನ ಮೇಲು ಭಾಗದ ಮುಚ್ಚಳವನ್ನು ಅಗತ್ಯವಿದ್ದಾಗ ಮಾತ್ರ ತೆಗೆಯಿರಿ. ಬೇರೆ ಸಮಯದಲ್ಲಿ ಅದು ಮುಚ್ಚಿರಬೇಕು. ಏಕೆಂದರೆ ಸೂರ್ಯನ ಕಿರಣ, ಗಾಳಿ, ಬೆಳಕು, ನೀರು ಕೆಡಲು ಕಾರಣವಾಗುತ್ತದೆ.

◆ ಟ್ಯಾಂಕು ನೆಲದೊಳಗಿದ್ದರೆ ಅದರ ತಳದಲ್ಲಿ ಸೇರುವ ಪುಡಿ ಮಣ್ಣನ್ನು ತೆಗೆದು ಸ್ವಚ್ಛಮಾಡಲು ಮೇಲು ಭಾಗದಲ್ಲಿ ಸೂಕ್ತ ಜಾಗ ಬಿಟ್ಟುಕೊಳ್ಳಿ.

◆ ಮಳೆಗಾಲಕ್ಕೆ ಮುಂಚೆ ಅಥವಾ ನೀರು ಮುಗಿದಾಗ, ಟ್ಯಾಂಕಿನ ತಳದಲ್ಲಿ ಶೇಖರವಾಗಿದ್ದ ಕಸವನ್ನು ಮುಚ್ಚಳ ತೆಗೆದು ಸ್ವಚ್ಛಮಾಡಿ.

## ಕುಡಿಯುವ ನೀರಿನ ಬಗ್ಗೆ ಎಚ್ಚರಿಕೆ!

ಮಳೆ ನೀರನ್ನು ಕುಡಿಯಲು ಬಳಸಬಹುದು. ಇತರೆ ಕೆಲಸಗಳಿಗೆ ಬಳಸುವ ನೀರಿಗಿಂತ ಕುಡಿಯಲು ಬಳಸುವ ನೀರಿನ ಬಗ್ಗೆ ಎಚ್ಚರಿಕೆ ಅತ್ಯಗತ್ಯ.

ಮಳೆ ನೀರು ಕೆಡಲು ಮೂರು ಅಂಶಗಳು ಕಾರಣವಾಗುತ್ತವೆ. ಅವು ಗಾಳಿ, ಸೂರ್ಯನ ಬೆಳಕು ಮತ್ತು ನೀರಿನಲ್ಲಿ ಬೆರೆತ ಜೈವಿಕ ಪದಾರ್ಥ. ಸರಿಯಾಗಿ ಶೋಧಿಸುವುದರಿಂದ, ಛಾವಣಿ ಸ್ವಚ್ಛವಾಗಿಡುವುದರಿಂದ ಜೈವಿಕ ಪದಾರ್ಥದಿಂದ ನೀರು ಕೆಡದಂತೆ ಮಾಡಬಹುದು. ಇನ್ನು ಗಾಳಿ, ಸೂರ್ಯನ ಬೆಳಕು ಬೀಳದಂತೆ ಟ್ಯಾಂಕ್ ಮೇಲುಭಾಗ ಮುಚ್ಚುವುದರಿಂದ ನೀರು ಕೆಡುವುದಿಲ್ಲ. ಅಲ್ಲದೆ ಕುಡಿಯುವ ನೀರನ್ನು ಕೆಳಕಂಡಂತೆ ಬಳಸುವುದು.

◆ ನೀರನ್ನು ಕಾಯಿಸಿ (ಕುದಿಸಿ) ಆರಿಸಿ ಕುಡಿಯುವುದು.

◆ 2 ಲೀಟರ್ ನೀರಿನಲ್ಲಿ ಒಂದು ದೊಡ್ಡ ಚಮಚ ಬ್ಲೀಚಿಂಗ್ ಪುಡಿಯನ್ನು ಬೆರೆಸಬೇಕು. ನಂತರ ಸುಮಾರು1000 ಲೀಟರ್‌ನೀರಿಗೆ ಸೇರಿಸಿ. ಆಗ ನೀರು ಬ್ಯಾಕ್ಟೀರಿಯಾಗಳಿಂದ ಮುಕ್ತವಾಗುತ್ತದೆ.

## ನಾನೆಷ್ಟು ನೀರು ಬಳಸುತ್ತೇನೆ?

ಒಬ್ಬ ಮನುಷ್ಯ ಸಾಮಾನ್ಯ ಪ್ರಜ್ಞೆಯಿಂದ ಸ್ವಲ್ಪ ಮಿತವಾಗಿ ನೀರನ್ನು ಬಳಸುತ್ತಾನೆ ಎಂದರೆ ಆತ 90-100 ಲೀಟರ್ ಬಳಸುತ್ತಾನೆ. ಅಂದರೆ ಕುಡಿಯಲು, ಅಡಿಗೆ, ಸ್ನಾನ, ಪಾತ್ರೆ ತೊಳೆಯಲು ಇತ್ಯಾದಿಗಳಿಗೆ ಬಳಸುತ್ತಾನೆ. ಈ ಲೆಕ್ಕಾಚಾರದಂತೆ 4 ಜನರಿರುವ ಒಂದು ಕುಟುಂಬಕ್ಕೆ ದಿನವೊಂದಕ್ಕೆ 400ಲೀಟರ್ ನೀರು ಬೇಕಾಗುತ್ತದೆ. ಇದು ಒಂದು ತಿಂಗಳಿಗೆ ಲೆಕ್ಕ ಹಾಕಿದರೆ 14,000 ನೀರು ಬೇಕಾಗುತ್ತದೆ. ಈಗ ಪಕ್ಕದಲ್ಲಿ ಕೊಟ್ಟಿರುವ ಅಂಕಿ ಅಂಶ ಗಮನಿಸಿ.

ಉದಾಹರಣೆಗಾಗಿ ಬೆಂಗಳೂರಿನಲ್ಲಿ ಕಳೆದ 10 ವರ್ಷಗಳಲ್ಲಿ ಆಗಿರುವ ಮಳೆಯ ಪ್ರಮಾಣದ ಪಟ್ಟಿ ನೋಡಿ. ಇದರಿಂದ ಒಂದು ವರ್ಷದ ಮಳೆ ನೀರಿನ ಬಳಕೆಯ ಗಾತ್ರವನ್ನು ಅರ್ಥಮಾಡಿಕೊಳ್ಳೋಣ.

1992ನೇ ವರ್ಷದಲ್ಲಿ ಆದ ಒಟ್ಟು ಮಳೆ 844.60 ಮಿಲಿ ಲೀಟರ್. ಇಷ್ಟು ಮಳೆ 56 ದಿನಗಳಲ್ಲಿ ಸುರಿದಿದೆ. ಇಷ್ಟು ದಿನಗಳಲ್ಲಿ 100 ಚದರ ಮೀಟರ್ ಅಗಲದ

ಭಾವಣಿಯಲ್ಲಿ ಸಂಗ್ರಹಿಸಿದರೆ ಅದರ ಗಾತ್ರ 67.568 ಲೀಟರ್‌ನಷ್ಟಾಗುತ್ತದೆ.

| ವರ್ಷ Year | ವಾರ್ಷಿಕ ಮಳೆ ಪ್ರಮಾಣ ಮಿ.ಮಿ. Rainfall mm | ಒಟ್ಟು ಮಳೆ ದಿವಸಗಳು Rainy Days | ಸಂಗ್ರಹವಾಗಬಹುದಾದ ಮಳೆನೀರು ೧೦೦ ಚದರ ಮೀಟರ್‌ಗೆ ಲೀಟರ್‌ಗಳಲ್ಲಿ Possible Collection Litres For 100 Sq mt |
|---|---|---|---|
| 1990 | 509.40 | 42 | 40,752 |
| 1991 | 1338.50 | 65 | 1,07.080 |
| **1992** | **844.60** | **56** | **67,568** |
| 1993 | 1059.70 | 65 | 84,776 |
| 1994 | 587.10 | 45 | 46,968 |
| 1995 | 1072.20 | 61 | 85,776 |
| 1996 | 1173.30 | 64 | 93,864 |
| 1997 | 717.40 | 52 | 57,392 |
| 1998 | 1431.80 | 68 | 1,14,544 |
| 1999 | 1009.40 | 52 | 80,720 |
| ಸರಾಸರಿ | 974.34 | 57 | 77,947 |

ಮೇಲಿನ ಉದಾಹರಣೆಯಂತೆ 5 ಜನರಿರುವ ಕುಟುಂಬಕ್ಕೆ ಈ ನೀರು ಎಷ್ಟು ದಿನ ಬಳಕೆ ಬರಬಹುದು? ಸುಮಾರು 150 ದಿನಗಳು ಬಳಕೆಗೆ ಬರುತ್ತದೆ. ತಿಂಗಳಲ್ಲಿ ಹೇಳುವುದಾದರೆ ಒಟ್ಟು ಐದು ತಿಂಗಳು ಬಳಸಬಹುದು. ಅಂದರೆ ಹೆಚ್ಚು ಕಡಿಮೆ ಒಂದು ವರ್ಷದಲ್ಲಿ 50% ರಷ್ಟು ನೀರಿನ ಪೂರೈಕೆ ಮಳೆಯಿಂದ ಪಡೆಯಬಹುದು.

ಇದಲ್ಲದೆ ನಾವು ನೀರನ್ನು ಮಿತ ಬಳಕೆ ಮಾಡಿದಂತಾಯಿತು. ಹಣದ ಉಳಿತಾಯವೂ ಹೌದು. ಅನಗತ್ಯವಾಗಿ ಬಾವಿ ತೋಡಿ ಅಂತರ್ಜಲವನ್ನು ಶೋಷಣೆ ಮಾಡುವುದನ್ನು ತಪ್ಪಿಸಿದಂತಾಯಿತು. ಶುದ್ಧವಾದ ನೀರನ್ನು ಬಳಸಿಕೊಂಡಂತೆ ಆಯಿತು. ಮಳೆರಾಯನಿಂದ ನಮಗೆ ಇನ್ನೆಷ್ಟು ತಾನೆ ಸಹಾಯ ಬೇಕು ಹೇಳಿ? ಇಷ್ಟು ಮಾತ್ರವಲ್ಲ ಒಂದು ಕಲ್ಪನೆ ಮಾಡಿಕೊಳ್ಳಿ. ಭಾರತದ ಪ್ರತಿಹಳ್ಳಿಗಳಲ್ಲಿ ಪ್ರತಿಮನೆಗಳೂ, ನಗರದ ಪ್ರತಿ ಮನೆಗಳಲ್ಲಿ ಮಳೆ ನೀರಿನ ಸಂಗ್ರಹಣೆ ಮತ್ತು ಬಳಕೆ ಪ್ರಾರಂಭಿಸಿದರು ಅಂದುಕೊಳ್ಳಿ. ಆಗ ಪ್ರತಿ ನಗರ ನೀರಿನ ಬಳಕೆಯಲ್ಲಿ ಸ್ವಾವಲಂಭಿ ಆಗುತ್ತದೆ. ನೀರಿಗಾಗಿ ಜಗಳವಾಡುವುದು ತಪ್ಪುತ್ತದೆ. ನೀರಿನಿಂದ ಬರುವ 70% ರೋಗಗಳು ಕಡಿಮೆಯಾಗುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ನಗರ ಮತ್ತು ಹಳ್ಳಿಗಳಲ್ಲಿ ಉಂಟಾಗುವ ಪ್ರವಾಹದ ಭೀತಿ ಕಡಿಮೆ ಆಗುತ್ತದೆ. ಶುದ್ಧ ಕುಡಿಯುವ ನೀರು ಸಿಗುತ್ತದೆ.

ಕೆಲವು ಆಸಕ್ತರು ಕುತೂಹಲಕ್ಕಾಗಿಯಾದರೂ ಪ್ರಯೋಗ ಮಾಡಿ ನೋಡಿಬಿಡುವ ಎಂಬ ಮನಸ್ಸುಳ್ಳವರು ನಮ್ಮಲ್ಲಿರುತ್ತಾರೆ. ಅಂತವರಿಗಾಗಿ ಕೆಲವು ಸುಲಭ ಮಳೆ ನೀರು ಸಂಗ್ರಹ ವಿಧಾನಗಳಿವೆ. ಅವುಗಳು ಹೀಗಿವೆ.

ಇವುಗಳಲ್ಲಿ ಮೊದಲನೆಯದು (Instant water Harvesting system) **ತತ್‌ಕ್ಷಣದ ಮಳೆ ನೀರಿನ ಬಳಕೆ ವಿಧಾನ.**

## ತತ್‌ಕ್ಷಣದ ಮಳೆನೀರು ಬಳಕೆ

ಮಳೆಗಾಲದ ದಿನಗಳಲ್ಲಿ ಮನೆಗೆ ನೀರಿನ ಅಗತ್ಯ ಬಿದ್ದಾಗ ತತ್‌ಕ್ಷಣ ಬೀಳುತ್ತಿರುವ ಮಳೆ ನೀರನ್ನು ಬಳಸಿಕೊಳ್ಳಬಹುದು. ಮನೆಯ ಸೂರಿಗೆ ಗಟರ್ಸ್ ಕಟ್ಟಿ ಮನೆಯೊಳಗಿರುವ ಹಂಡೆಗೆ ಅಥವಾ ತೊಟ್ಟಿಗೆ ನೀರು ಸೇರುವಂತೆ ಮಾಡಬಹುದು. ಇದಕ್ಕೆ ಯಾವುದೇ ವೆಚ್ಚ ಬೀಳುವುದಿಲ್ಲ.

ಅಂತಹ ಉದಾಹರಣೆಯನ್ನು ಚಿತ್ರದಲ್ಲಿ ನೀಡಿದೆ. ಮನೆಯೊಡೆಯನ ಬಡತನ ಈ ಪದ್ದತಿಯ ಅವಿಷ್ಕಾರಕ್ಕೆ ಕಾರಣವಾಗಿದೆ ಎಂಬುದನ್ನು ಗಮನಿಸಬೇಕು. ಸೂರಿನ ನೀರು 'ಕ್ಯಾನ್' ವೊಂದಕ್ಕೆ ಬಂದು ಅಲ್ಲಿಂದ ಪಾಲಿಥಿನ್ ಹಾಳೆಯ ಮೂಲಕ ಟ್ಯಾಂಕ್‌ಗೆ ಬಂದು ಸೇರುತ್ತಿರುವುದನ್ನು ನಾವು



ತತ್‌ಕ್ಷಣದ ಮಳೆನೀರಿನ ಬಳಕೆ ವಿಧಾನ

ನೋಡಬಹುದು. ಅಂದರೆ ಈತನಿಗೆ ಬಡತನವಿದ್ದರು ಮಳೆನೀರು ಸಂಗ್ರಹಿಸಲು ಅಡ್ಡಿ ಮಾಡಿಲ್ಲ ಎಂಬುದು ಇದರ ವಿಶೇಷ.

## ಕೈ ತೋಟದ ಬೆಳೆಗೆ ಮಳೆನೀರು

ಮನೆ ಮೇಲೆ ಬೀಳುವ ನೀರು ಪೈಪಿನ ಮೂಲಕ ಹರಿದು ಚರಂಡಿ ಸೇರುವುದು ಸಾಮಾನ್ಯ. ಈ ಪೈಪಿನ ನೀರನ್ನು ಹಂಡೆಯೊಂದಕ್ಕೆ ಅಥವಾ ಡ್ರಮ್ಮಿಗೆ ತುಂಬಿಕೊಂಡರೆ ಆ ನೀರನ್ನು ತೋಟದ ಗಿಡಗಳಿಗೆ ಬಳಸಬಹುದು. ಇದಲ್ಲದೆ. ಈ ನೀರನ್ನು ವಾಹನ ತೊಳೆಯಲು ಪಾತ್ರೆ ಇತ್ಯಾದಿಗಳನ್ನು ಶುಚಿಗೊಳಿಸಲು ಬಳಸಿಕೊಳ್ಳುವುದು.

## ಬರಿದಾದ ಬಾವಿ, ಬರಿದಾದ ಅಂತರ್ಜಲ ತುಂಬುವಂತೆ ಮಾಡಲು ಮಳೆ ನೀರಿನ ಬಳಕೆ

ಪ್ರತಿ ಮನೆಯವರು ಮನೆಯ ಸುತ್ತ ಲಭ್ಯವಿದ್ದ ಜಾಗದಲ್ಲಿ ಹಿಂಗುಗುಂಡಿ ಮಾಡಿ, ಆಗ ಮಳೆ ನೀರಿನ ಕೆಲವು ಭಾಗ ಭೂಮಿ ಸೇರುತ್ತದೆ. ಮನೆಯ ಆವರಣದಲ್ಲಿ ತೆರೆದ ಬಾವಿ ಇದ್ದರೆ ಅದಕ್ಕೆ ಮಳೆ ನೀರು ಹೋಗುವಂತೆ ಮಾಡಿ. ಇದರಿಂದ ಬಾವಿಯ ನೀರಿನ ಪ್ರಮಾಣ ಹೆಚ್ಚುತ್ತದೆ ಮತ್ತು ಅಂತರ್ಜಲದ ಪ್ರಮಾಣವೂ ಹೆಚ್ಚಾಗುತ್ತದೆ. ಪ್ರತಿಮನೆಯವರು ಈ ವಿಧಾನ ಅನುಸರಿಸಿದರೆ ಆ ಪ್ರದೇಶದಲ್ಲಿ ಅಂತರ್ಜಲದ ವೃದ್ಧಿಯಾಗುತ್ತದೆ. ನೀರಿನ ಅಭಾವವೂ ನೀಗುತ್ತದೆ.

## ಆತ್ಮೀಯರೇ,

ಹೀಗೆ ಬರೆಯುತ್ತಾ ಹೋದರೆ ಇನ್ನೂ ಮುಂದುವರಿಯುತ್ತದೆ. ಮೇಲೆ ತಿಳಿಸಿದ ಎಲ್ಲ ಅನುಭವಗಳು ನನಗೆ ದೊರಕಿದ್ದು ಒಂದು ತಿಂಗಳ ಅವಧಿಯಲ್ಲಿ. ಈ ಒಂದು ತಿಂಗಳ ಒಂದೊಂದು ದಿನಗಳು ಅಮೂಲ್ಯವಾದವುಗಳೇ ಆಗಿದ್ದವು. ಮಳೆ ನೀರು ಸಂಗ್ರಹ, ಇದರ ಬಳಕೆ ಇತ್ಯಾದಿಗಳ ವಿಷಯ ನನ್ನಲ್ಲಿ ಇಷ್ಟು ಪ್ರಭಾವ ಬೀರಿದ್ದು ನನಗೇ ನಂಬಿಕೆ ಆಗುತ್ತಿಲ್ಲ. ಆದರೆ ಇದು ನಿಜ.

ಮಳೆನೀರಿನ ಬಳಕೆ ಕುರಿತ ಅನೇಕ ಸಾಹಿತ್ಯಗಳನ್ನು ನಾನು ಸಂಗ್ರಹಿಸಿದ್ದೇನೆ. ಮಳೆನೀರಿನ ಬಳಕೆಯ ಇಂದಿನ ಪ್ರಯೋಗಗಳ ಜೊತೆಗೆ ಸಾಂಪ್ರದಾಯಿಕ ಪದ್ಧತಿಗಳ ಅನೇಕ ಮುಖಗಳ ಪರಿಚಯ ನನಗಾಗಿದೆ. ಒಂದು ಸಮುದಾಯದ ನೀರಿನ ಬೇಡಿಕೆ ಪೂರೈಸಲು ನಿರ್ಮಿತಗೊಂಡ ಪದ್ಧತಿಗಳು ನನಗೆ ಅಪಾರ ಕುತೂಹಲ ಉಂಟುಮಾಡುತ್ತಿವೆ. ಅಂದಿನ ಜನರಲ್ಲಿದ್ದ ಸಾಮೂಹಿಕ ಪ್ರಜ್ಞೆಯ ಸಮೃದ್ಧಿ ಇಂದು ವಿರಳವಾಗುತ್ತಿರುವುದನ್ನು ಕಂಡು ನನಗೆ ಭಯ ಮತ್ತು ಆತಂಕವಾಗುತ್ತಿದೆ. ಮುಂದೊಂದು ದಿನ ನೀರಿಗಾಗಿ ನಾವು ಪಡಬೇಕಾದ ಬವಣೆ ಯಾವ ಸ್ವರೂಪದಲ್ಲಿರಬಹುದು ಎಂಬ ಯೋಚನೆ ನನಗೆ.

ಈ ಒಂದು ತಿಂಗಳ ಹಿಂದೆ ನಾನಿದ್ದ ಮನಸ್ಥಿತಿ ಇಂದಿನ ನನ್ನ ಮನಸ್ಥಿತಿಯಲ್ಲಿ ಎಂತಹ ಬದಲಾವಣೆ !ಈ ಹಿಂದೆ ಅನೇಕ ಒಳ್ಳೆಯ ಮಳೆ ದಿನಗಳನ್ನು ಕಂಡಿದ್ದೆ. ತುಂಬಿ ಹರಿಯುವ ಹಳ್ಳಕೊಳ್ಳ. ಕೆರೆಕಟ್ಟೆಗಳು ನೋಡಿ ಖುಷಿ ಪಟ್ಟಿದ್ದೆ. ಕೆಂಬಣ್ಣದಿಂದ ಹರಿಯುವ ನೀರಿನಲ್ಲಿ

ಆಟವಾಡಿದ್ದೆ. ಬುದ್ಧಿ ತಿಳಿದ ನಂತರ ಈ ಹುಡುಗಾಟಗಳು ನಿಂತವು. ಆದರೆ ಮಳೆರಾಯನ ಆರ್ಭಟ, ಅಟ್ಟಹಾಸ ನೋಡಿ ಮೈ ಮರೆತ ದಿನಗಳೂ ಇವೆ.

ಆದರೆ ಇಂದು ಅದೇ ಮಳೆರಾಯ ಬೇರೆ ರೀತಿಯ ಪಾಠಗಳನ್ನು ಹೇಳುತ್ತಿದ್ದಾನೆ. ಮನೆಯ ತೊಟ್ಟಿಯಲ್ಲಿ ಧೋ ಎಂದು ಬೀಳುವ ಮಳೆ ನೀರನ್ನು ಸಂಗ್ರಹಿಸುವ ಕನಸು ಕಾಣುತ್ತೇನೆ. ಹರಿದು ಹೋಗುವ ನೀರನ್ನು ಭೂಮಿಯಲ್ಲಿ ಇಂಗಿಸುವ ಕನಸು ಕಾಣುತ್ತೇನೆ. ಹೀಗೆ ಕನಸು ಮತ್ತು ಆಸೆಗಳ ಸಾಲು ಮುಂದುವರಿಯುತ್ತದೆ.

ಊರಿನ ಕೆಲಮಂದಿ ತಮ್ಮ ಮನೆಯ ಪಡಸಾಲೆಯಲ್ಲಿ ಕುಳಿತು ಮಾತನಾಡುವುದನ್ನು ಕೇಳಿದ್ದೇನೆ. " ಆ ಸ್ಕೂಲು ಮನೆಗಿಂತ ಎರಡು ಪಟ್ಟು ದೊಡ್ಡ ಮನೆ ನಮ್ದು. ಈ ಸೂರಿಂದ ಬೀಳೋ ನೀರನೆಲ್ಲ ಸಂಗ್ರಹಿಸಿದರೆ ಎಂತಹ ದೊಡ್ಡ ಟ್ಯಾಂಕು ಕಟ್ಟಬೇಕು?" ಅಂತ ಅಂದಾಜಿಸುತ್ತಾ ಹರಟುತ್ತಾರೆ. ಈ ಮಾತುಗಳು ನನ್ನಲ್ಲಿ ಆಶಾಭಾವನೆ ಮೂಡಿಸುತ್ತವೆ. ಒಂದಲ್ಲ ಒಂದು ದಿನ ಈ ಜನ ಮಾತು ಕೇಳದ ತುಂಟು ಹುಡುಗನಂತೆ ಹರಿದು ಹೋಗುವ ಆ ನೀರಿಗೆ ತಡೆ ಒಡ್ಡುತ್ತಾರೆ. ಎಂದು ಇದು ಖಂಡಿತ.

ಇದು ನನ್ನ ಆಸೆ. ಇದು ರಾಜ್ಯ ಸಂಪನ್ಮೂಲ ಕೇಂದ್ರದ ಆಸೆ ಕೂಡ ಹೌದು. ಅಂತಹ ದಿನಗಳು ಬೇಗ ಬರಲಿ. ನಮ್ಮ ಹಳ್ಳಿಯ ಪ್ರತಿಯೊಬ್ಬರ ಮನೆ ನೀರಿನ ವಿಷಯದಲ್ಲಿ, ಅಭಿವೃದ್ಧಿ ವಿಷಯದಲ್ಲಿ ಸ್ವಾವಲಂಭಿ ಆಗಲಿ. ಅಷ್ಟೆ ಅಲ್ಲ ಪ್ರತಿಯೊಂದು ಮನೆ **"ಹಂಗಿಲ್ಲದ ಅರಮನೆ"** ಆಗಲಿ ಎಂದು ಹಾರೈಸುತ್ತೇನೆ.

## ಗಮನಿಸಿ

**ಈ ಸಾಹಿತ್ಯ ಓದಿದ ಹಲವು ಮಂದಿ ನನ್ನಂತೆ ಮಳೆ ನೀರಿನ ಬಳಕೆ ಬಗ್ಗೆ ಆಸಕ್ತಿ ತಾಳಬಹುದು ಎಂಬುದು ನನ್ನ ನಂಬಿಕೆ. ಅಂತಹ ಸಾಹಸಿಗಳಿಗೆ ಮಳೆನೀರಿನ ಬಳಕೆ ಬಗ್ಗೆ ಅನೇಕ ಕುತೂಹಲ ತಣಿಸಲು, ಮಾಹಿತಿಗಳು ಬೇಕಿರುತ್ತವೆ. ಅವರ ಈ ಕುತೂಹಲದ ಕೆಲವು ಅಂಶಗಳಲ್ಲಿ ಕೆಲವನ್ನಾದರು ತಣಿಸುವ ಬಯಕೆ ನನ್ನದು. ಅದಕ್ಕಾಗಿ ಮುಂದಿನ ಒಂದೆರಡು ಪುಟಗಳಲ್ಲಿ ರಾಜ್ಯದಲ್ಲಿನ ಮಳೆನೀರು ಸಂಗ್ರಹದ ಕುರಿತಂತೆ ಕೆಲವು ಪಟ್ಟಿಗಳ ವಿವರ ನೀಡಿದೆ. ಈ ಎಲ್ಲಾ ಮಾಹಿತಿಗಳು ನಿಮಗೆ ಉಪಯೋಗಕ್ಕೆ ಬಂದರೆ ಈ ಕಾರ್ಯಕ್ರಮ ತನ್ನ ಸಾರ್ಥಕತೆಯನ್ನು ಕಾಣುತ್ತದೆ.**

*ನಿಮಗೆಲ್ಲರಿಗೂ ವಂದನೆಗಳು.*

* * *



ಪಟ್ಟಿ ಒಂದು

## ಮಳೆನೀರಿನ ಬಳಕೆಯನ್ನು ಅಂದಾಜು ಮಾಡುವ ಬಗೆ

### ಛಾವಣಿ ವಿಸ್ತೀರ್ಣ - ಬೀಳುವ ಮಳೆ ಪ್ರಮಾಣ - ಸಂಗ್ರಹವಾಗುವ ಮಳೆ

**ROOF AREA - RAINFALL - RAINWATER COLLECTION**

| Roof Area (Sq.mts) | YEARLY RAINFALL (MM) | | | | | | | | | | | | |
|---|---|---|---|---|---|---|---|---|---|---|---|---|---|
| | 300 | 400 | 500 | 600 | 700 | 800 | 900 | 1000 | 1100 | 1200 | 1300 | 1400 | 1500 |
| 10 | 2400 | 3200 | 4000 | 4800 | 5600 | 6400 | 7200 | 8000 | 8800 | 9600 | 10400 | 11200 | 12000 |
| 20 | 4800 | 6400 | 8000 | 9600 | 11200 | 12800 | 14400 | 16000 | 17600 | 19200 | 20800 | 22400 | 24000 |
| 30 | 7200 | 9600 | 12000 | 14400 | 16800 | 19200 | 21600 | 24000 | 26400 | 28800 | 31200 | 33600 | 36000 |
| 40 | 9600 | 12800 | 16000 | 19200 | 22400 | 25600 | 28800 | 32000 | 35200 | 38400 | 41600 | 44800 | 48000 |
| 50 | 12000 | 16000 | 20000 | 24000 | 28000 | 32000 | 36000 | 40000 | 44000 | 48000 | 52000 | 56000 | 60000 |
| 60 | 14400 | 19200 | 24000 | 28800 | 33600 | 38400 | 43200 | 48000 | 52800 | 57600 | 62400 | 67200 | 72000 |
| 70 | 16800 | 22400 | 28000 | 33600 | 39200 | 44800 | 50400 | 56000 | 61600 | 67200 | 72800 | 78400 | 84000 |
| 80 | 19200 | 25600 | 32000 | 38400 | 44800 | 51200 | 57600 | 64000 | 70400 | 76800 | 83200 | 89600 | 96000 |
| 90 | 21600 | 28800 | 36000 | 43200 | 50400 | 57600 | 64800 | 72000 | 79200 | 86400 | 93600 | 100800 | 108000 |
| 100 | 24000 | 32000 | 40000 | 48000 | 56000 | 64000 | 72000 | 80000 | 88000 | 96000 | 104000 | 112000 | 120000 |
| 110 | 26400 | 35200 | 44000 | 52800 | 61600 | 70400 | 79200 | 88000 | 96800 | 105600 | 114400 | 123200 | 132000 |
| 120 | 28800 | 38400 | 48000 | 57600 | 67200 | 76800 | 86400 | 96000 | 105600 | 115200 | 124800 | 134400 | 144000 |
| 130 | 31200 | 41600 | 52000 | 62400 | 72800 | 83200 | 93600 | 104000 | 114400 | 124800 | 135200 | 145600 | 156800 |
| 140 | 33600 | 44800 | 56000 | 67200 | 78400 | 89600 | 100800 | 112000 | 123200 | 134400 | 145600 | 156800 | 168000 |
| 150 | 36000 | 48000 | 60000 | 72000 | 84000 | 96000 | 108000 | 120000 | 132000 | 144000 | 156000 | 168000 | 180000 |

**Yearly Collecton of Water ( Liters)**

**Note: Collection efficiency assumed as 80%**



## ಛಾವಣಿ ವಿಸ್ತೀರ್ಣ - ಬೀಳುವ ಮಳೆ ಪ್ರಮಾಣ - ಸಂಗ್ರಹವಾಗುವ ಮಳೆ

### ROOF AREA - RAINFALL - RAINWATER COLLECTION

| Roof Area (Sq.mts) | YEARLY RAINFALL (MM) | | | | | | | | | | | | |
|---|---|---|---|---|---|---|---|---|---|---|---|---|---|
| | 300 | 400 | 500 | 600 | 700 | 800 | 900 | 1000 | 1100 | 1200 | 1300 | 1400 | 1500 |
| 160 | 38400 | 51200 | 64000 | 76800 | 89600 | 102400 | 115200 | 128000 | 140800 | 153600 | 166400 | 179200 | 192000 |
| 170 | 40800 | 54400 | 68000 | 81600 | 95200 | 108800 | 122400 | 136000 | 149600 | 163200 | 176800 | 190400 | 204000 |
| 180 | 43200 | 57600 | 72000 | 86400 | 100800 | 115200 | 129600 | 144000 | 158400 | 172800 | 187200 | 201600 | 216000 |
| 190 | 45600 | 60800 | 76000 | 91200 | 106400 | 121600 | 136800 | 152000 | 167200 | 182400 | 197600 | 212800 | 228000 |
| 200 | 48000 | 64000 | 80000 | 96000 | 112000 | 128000 | 144000 | 160000 | 176000 | 192000 | 208000 | 224000 | 240000 |
| 210 | 50400 | 67200 | 84000 | 100800 | 117600 | 134400 | 151200 | 168000 | 184800 | 201600 | 218400 | 235200 | 252000 |
| 220 | 52800 | 70400 | 88000 | 105600 | 123200 | 140800 | 158400 | 176000 | 193600 | 211200 | 228800 | 246400 | 264000 |
| 230 | 55200 | 73600 | 92000 | 110400 | 128800 | 147200 | 165600 | 184000 | 202400 | 220800 | 239200 | 257600 | 276000 |
| 240 | 57600 | 76800 | 96000 | 115200 | 134400 | 153600 | 172800 | 192000 | 211200 | 230400 | 249600 | 268800 | 288000 |
| 250 | 60000 | 80000 | 100000 | 120000 | 140000 | 160000 | 180000 | 200000 | 220000 | 240000 | 260000 | 280doo | 300000 |
| 260 | 62400 | 83200 | 104000 | 124800 | 145600 | 166400 | 187200 | 208000 | 228800 | 249600 | 270400 | 291200 | 312000 |
| 270 | 64800 | 86400 | 108000 | 129600 | 151200 | 172800 | 194400 | 216000 | 237600 | 259200 | 280800 | 302400 | 324000 |
| 280 | 67200 | 89600 | 112000 | 134400 | 156800 | 179200 | 201600 | 224000 | 246400 | 268800 | 291200 | 316600 | 336000 |
| 290 | 69600 | 92800 | 116000 | 139200 | 162400 | 185600 | 208800 | 232000 | 255200 | 278400 | 301600 | 324800 | 348000 |
| 300 | 72000 | 96000 | 120000 | 144000 | 168000 | 192000 | 216000 | 240000 | 264000 | 288000 | 312000 | 336000 | 360000 |

**Note: Collection efficiency assumed as 80%**

**Yearly Collecton of Water ( Liters)**



### ಪಟ್ಟಿ ಎರಡು

# ಕರ್ನಾಟಕ ರಾಜ್ಯದಲ್ಲಿ ಬೀಳುವ ಮಳೆಯ ಜಿಲ್ಲಾವಾರು ಪ್ರಮಾಣ

| ಜಿಲ್ಲೆಗಳು | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ |
|---|---|---|---|---|---|---|---|---|---|---|---|---|---|
| ಬೆಂಗಳೂರು ನಗರ | 5 | 8 | 8 | 42 | 116 | 69 | 99 | 123 | 149 | 168 | 64 | 47 | 867 |
| ಬೆಂಗಳೂರು ಗ್ರಾಮೀಣ | 4 | 6 | 8 | 42 | 107 | 68 | 84 | 112 | 151 | 158 | 63 | 13 | 817 |
| ಕೋಲಾರ | 7 | 6 | 9 | 33 | 80 | 61 | 81 | 100 | 145 | 136 | 69 | 17 | 744 |
| ತುಮಕೂರು | 3 | 4 | 6 | 34 | 91 | 61 | 69 | 85 | 128 | 142 | 56 | 10 | 0.688 |
| ಶಿವಮೊಗ್ಗ | 1 | 2 | 8 | 44 | 87 | 307 | 681 | 352 | 130 | 146 | 44 | 10 | 1813 |
| ಚಿದ್ರದುರ್ಗ | 3 | 4 | 5 | 25 | 76 | 49 | 63 | 68 | 99 | 124 | 46 | 12 | 573 |
| ದಾವಣಗೆರೆ | 2 | 3 | 8 | 35 | 78 | 66 | 98 | 80 | 102 | 120 | 42 | 10 | 644 |
| ಮೈಸೂರು | 3 | 6 | 13 | 66 | 139 | 65 | 100 | 76 | 89 | 152 | 61 | 13 | 782 |
| ಚಾಮರಾಜನಗರ | 4 | 5 | 11 | 66 | 140 | 47 | 53 | 68 | 100 | 163 | 76 | 19 | 751 |
| ಮಂಡ್ಯ | 3 | 5 | 8 | 50 | 123 | 44 | 45 | 64 | 112 | 169 | 62 | 15 | 700 |
| ಕೊಡಗು | 5 | 6 | 15 | 74 | 147 | 486 | 938 | 529 | 219 | 202 | 80 | 19 | 2718 |
| ಹಾಸನ | 3 | 4 | 8 | 59 | 109 | 118 | 250 | 139 | 98 | 161 | 65 | 15 | 1031 |
| ಚಿಕ್ಕಮಗಳೂರು | 3 | 4 | 9 | 55 | 102 | 300 | 672 | 382 | 160 | 164 | 59 | 16 | 1925 |
| ದಕ್ಷಿಣ ಕನ್ನಡ | 5 | 2 | 10 | 47 | 172 | 940 | 1301 | 806 | 321 | 257 | 94 | 19 | 3975 |
| ಉಡುಪಿ | 4 | 2 | 5 | 37 | 170 | 1055 | 1342 | 800 | 383 | 224 | 78 | 19 | 4119 |
| ಧಾರವಾಡ | 1 | 3 | 7 | 45 | 85 | 95 | 152 | 100 | 112 | 120 | 42 | 10 | 772 |
| ಗದಗ್ | 2 | 2 | 4 | 35 | 71 | 70 | 68 | 70 | 128 | 116 | 37 | 9 | 612 |
| ಹಾವೇರಿ | 2 | 2 | 5 | 40 | 77 | 96 | 172 | 103 | 85 | 122 | 39 | 11 | 753 |
| ಉತ್ತರ ಕನ್ನಡ | 1 | 1 | 4 | 28 | 103 | 680 | 1006 | 554 | 248 | 148 | 49 | 12 | 2835 |
| ಬೆಳಗಾಂ | 2 | 2 | 8 | 33 | 65 | 104 | 205 | 122 | 110 | 111 | 38 | 9 | 808 |
| ಬಿಜಾಪುರ | 3 | 4 | 6 | 19 | 35 | 78 | 79 | 77 | 157 | 84 | 28 | 8 | 578 |
| ಬಾಗಲಕೋಟೆ | 2 | 3 | 5 | 24 | 48 | 65 | 73 | 67 | 141 | 93 | 33 | 8 | 562 |
| ರಾಯಚೂರು | 1 | 2 | 6 | 17 | 34 | 76 | 108 | 113 | 152 | 84 | 22 | 7 | 621 |
| ಕೊಪ್ಪಲ್ | 1 | 0 | 2 | 23 | 50 | 60 | 82 | 91 | 136 | 100 | 21 | 7 | 572 |
| ಬಳ್ಳಾರಿ | 2 | 3 | 4 | 28 | 64 | 66 | 85 | 95 | 142 | 105 | 33 | 9 | 636 |
| ಗುಲ್ಬರ್ಗ | 3 | 4 | 10 | 19 | 33 | 108 | 161 | 144 | 193 | 81 | 16 | 5 | 777 |
| ಬೀದರ್ | 4 | 6 | 11 | 21 | 23 | 131 | 190 | 180 | 192 | 65 | 19 | 6 | 847 |
| ಜಿಲ್ಲಾ ಸರಾಸರಿ | 3 | 4 | 7 | 37 | 87 | 182 | 285 | 190 | 150 | 134 | 49 | 12 | 1139 |



ಅಧ್ಯಾಯ - 15

ತುಕಾರಾಮ್ ಎಸ್.
ರಾಜು ಬಿ.
ರಾಜ್ಯ ಸಂಪನ್ಮೂಲ ಕೇಂದ್ರ, ಕರ್ನಾಟಕ
ಪಿ.ಬಿ. ನಂ. 301,
ಹಳೇ ಹೆಚ್. ಡಿ. ಕೋಟೆ ರಸ್ತೆ, ಮೈಸೂರು.

# ಛಾವಣಿ ಮಳೆ ನೀರು ಬಳಕೆ ಸಂಘಟನೆ -ಏನು ? ಏಕೆ ? ಹೇಗೆ ?

**ಸಮಸ್ತ ಭಾರತೀಯರನ್ನು ಒಗ್ಗೂಡಿಸಿ ಪರಕೀಯರ ಆಳ್ವಿಕೆ ವಿರುದ್ಧ ಹೋರಾಡಿ ದಾಸ್ಯ ಸಂಕೋಲೆಗಳನ್ನು ಕಿತ್ತೆಸೆದದ್ದು ಭಾರತದ ಸ್ವಾತಂತ್ರ ಚಳುವಳಿ. ಅಷ್ಟೇ ಬೃಹತ್ ಚಳುವಳಿಯ ಮತ್ತೊಂದು ಘಟನೆ ಎಂದರೆ ಅದು ಅನಕ್ಷರತೆ ಎಂಬ ದಾಸ್ಯ ಸಂಕೋಲೆಯಿಂದ ಬಿಡುಗಡೆ ಹೊಂದಲು ನಡೆಸಿದ ಸಾಕ್ಷರತಾ ಚಳುವಳಿ ಆಂದೋಲನ. ಅಕ್ಷರ ಜ್ಞಾನ ನೀಡುವ ಚಳುವಳಿಯಾಗಿ ಪ್ರಾರಂಭಗೊಂಡು ಈಗ ಜೀವನ ಶಿಕ್ಷಣ ನೀಡುವ ಕಾರ್ಯಕ್ರಮವಾಗಿ ರೂಪುಗೊಂಡಿದೆ. ಇದರ ಅಂಗವಾಗಿ ಗ್ರಾಮಗಳಲ್ಲಿ ಪ್ರಾರಂಭಗೊಂಡ ನಿರಂತರ ಶಿಕ್ಷಣ ಕೇಂದ್ರಗಳು ಮಳೆನೀರಿನ ಬಳಕೆ ಕುರಿತಂತೆ ಅರಿವು ನೀಡುವ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸಬೇಕಿದೆ. ಸ್ವಾತಂತ್ರ್ಯ ಪೂರ್ವದ ಚಳುವಳಿ ಹಾಗೂ ಸಾಕ್ಷರತಾ ಚಳುವಳಿಯ ಮಾದರಿಯಲ್ಲೇ ಇಂದು ನೀರು ಮಳೆನೀರು ಸಂಗ್ರಹ ಬಳಕೆ ಕುರಿತು ಚಳುವಳಿಯೊಂದನ್ನು ರೂಪಿಸಬೇಕಿದೆ.**

**ಮಳೆ ನೀರು ಬಳಕೆ ಹಾಗೂ ಅದರ ತಂತ್ರಜ್ಞಾನವನ್ನು ಗ್ರಾಮೀಣ ಜನತೆಗೆ ಮುಟ್ಟಿಸುವ ಹಾಗೂ ಜನರನ್ನು ಇದಕ್ಕಾಗಿ ಸಂಘಟಿಸುವ ಕಾರ್ಯವನ್ನು ಇಂದು ತುರ್ತಾಗಿ ಹಮ್ಮಿಕೊಳ್ಳಬೇಕಿದೆ. ನಿರಂತರ ಶಿಕ್ಷಣ ಕೇಂದ್ರದಿಂದ ಜನರನ್ನು ಸಂಘಟಿಸಿ ಸಾಕ್ಷರತೆಯ ಜೊತೆಗೆ ಜಲ ಸಾಕ್ಷರತೆಯನ್ನು ನೀಡುವ ಹೊಣೆಗಾರಿಕೆ ಹೊಂದಬೇಕಿದೆ. ಈ ಹೊಣೆಗಾರಿಕೆಯ ಸ್ವರೂಪ ಎಂಥಹದು**? ಏನು? ಏಕೆ ?ಹೇಗೆ ? ಎಂಬುದನ್ನು ವಿವರಿಸುವುದೇ ಈ ಲೇಖನದ ಆಶಯ.

'ಮಳೆ ನೀರು' ಪ್ರಕೃತಿಯ ಕೊಡುಗೆ. ಹಿಂದೆ ಯಥೇಚ್ಛವಾಗಿ ಬೀಳುತ್ತಿದ್ದ ಮಳೆ ಇಂದು ಮನುಷ್ಯನ ಬದುಕಿನೊಡನೆ ಕಣ್ಣಾಮುಚ್ಚಾಲೆ ಆಟವಾಡುತ್ತಿದೆ. ಇದಕ್ಕೆ ಕಾರಣರು ಯಾರು? ಹಿಂದಿನಂತೆ ಸಮೃದ್ಧತೆಯನ್ನು ಕಾಣಲು ಸಾಧ್ಯವಿಲ್ಲವೇ? ಸಾಧ್ಯವಿದೆ!. ಯಾವಾಗ?. ಬಹುಶಃ ಆಗಿರುವ ತಪ್ಪನ್ನು ತಿದ್ದುಕೊಂಡು ಎಚ್ಚೆತ್ತಾಗ! ಹಾಗಿದ್ದರೆ ಆಗಿರುವ ತಪ್ಪೇನು? ಒಮ್ಮೆ ಹಿಂತಿರುಗಿ ನೋಡೋಣ.

ನಾವು ಅಭಿವೃದ್ಧಿ ಹೆಸರಿನಲ್ಲಿ ಪರಿಸರದೊಂದಿಗಿನ ಸಹಬಾಳ್ವೆಯನ್ನು ಹೇಗೆ ಏರುಪೇರು ಮಾಡುತ್ತಾ



**ಹಾಸನ ಜಿಲ್ಲೆಯ ಗಂಡಸಿಯಲ್ಲಿ ಮಹಿಳಾ ನವಸಾಕ್ಷರರ ಸ್ವಸಹಾಯ ಸಂಘದ ಸದಸ್ಯರು ಕೆರೆ ಹೂಳು ತೆಗೆಯುವುದರ ಮೂಲಕ ಜಲಸಂರಕ್ಷಣೆಗೆ ಪಣತೊಟ್ಟು ರಾಜ್ಯದ ಗಮನ ಸೆಳೆದಿದ್ದಾರೆ.**

ಅದರೊಂದಿಗಿನ ಒಡನಾಟವನ್ನು ಮರೆತೆವು ಎಂಬುದನ್ನು ಅರಿಯೋಣ. ಹಿಂದೆ ಜನರ ಸಂಖ್ಯೆ ಕಡಿಮೆ ಇತ್ತು. ಆದರೆ ಬರಬರುತ್ತಾ ಜನಸಂಖ್ಯೆ ಬೆಳೆಯಿತು. ಇದು ಬೆಳೆದಂತೆ ನಮ್ಮ ಬೇಡಿಕೆಗಳು ಬೆಳೆದವು. ಭೂಮಿಯ ಮೇಲೆ ಜನ ಹೆಚ್ಚಾದಂತೆ ಇಲ್ಲಿನ ಕಾಡಿನ ಗಾತ್ರ ಚಿಕ್ಕದಾಯಿತು. ಭೂಮಿಯ ಮೇಲಿದ್ದ ಕೆರೆಕಟ್ಟೆಗಳು, ನದಿಗಳು ಜನರ ನಿತ್ಯ ಬಳಕೆಗೆ ಒಳಗಾಗುತ್ತಾ ಹೋದವು. ಎಲ್ಲಿ ನೀರಿನ ಬಳಕೆಯು ತೀವ್ರಗತಿಯಲ್ಲಿ ನಡೆಯುತ್ತಿತ್ತೋ?, ಎಲ್ಲಿ ನೀರಿನ ಬಗ್ಗೆ ಅದು ಮುಗಿಯುವ ಸಂಪತ್ತೆಂಬ ಅರಿವು ಇಲ್ಲವಾಯಿತೋ ಅಲ್ಲಿ? ಅಂತರ್ಜಲಗಳು ಬತ್ತತೊಡಗಿದವು.

ಅತಿಯಾದ ಅಂರ್ತಜಲದ ಬಳಕೆಯಿಂದ ಭೂಮಿ ಒಡಲು ಬರಿದಾಯಿತು. ಅದರೊಂದಿಗೆ ಕಾಡಿನ ನಾಶ ನಿರಂತರವಾಗಿ ಸಾಗಿತು. ಕಾಡಿನ ನಾಶದಿಂದ ಮಳೆರಾಯ ನಮ್ಮಿಂದ ದೂರವಾದ. ವಾಯುಮಾಲಿನ್ಯದಿಂದ ಮಳೆನೀರು ಕಲುಷಿತಗೊಳ್ಳುವ ಕಾಲವೂ ಬಂದಿತು. ಅಳಿದುಳಿದಿರುವ ಅಂತರ್ಜಲಕ್ಕೆ ನಿಧಾನವಾಗಿ ವಿಷ ಹರಿದು ಕಲುಷಿತ ಗೊಳ್ಳತೊಡಗಿತು. ಈ ಎಲ್ಲದರಿಂದಾಗಿರುವ ಪರಿಣಾಮ ಗಳೇನು? ನದಿ, ಕೆರೆಕಟ್ಟೆಗಳ ನೀರು ನಿತ್ಯದ ಬದುಕಿಗೆ ಸಾಲದಾಗುತ್ತಿದೆ. ಕುಡಿಯುವ ನೀರಿಗೂ ಅಭಾವವನ್ನು ತಂದೊಡ್ಡಿದೆ. ಈಗ ನಾವು ಎಚ್ಚೆತ್ತುಕೊಂಡು ಕಾರ್ಯೋನ್ಮುಖರಾಗುವುದು ಅನಿವಾರ್ಯ.

ಹೀಗಾಗಿ ಇಂದು ನಮಗಿರುವ ಶುದ್ಧ ನೀರಿನ ಮೂಲಗಳಲ್ಲಿ 'ಮಳೆನೀರು' ಅಂತಿಮ ಆಶಾಕಿರಣ!. ಪ್ರಕೃತಿ ನಮಗೆ ಪುಕ್ಕಟೆಯಾಗಿ ನೀಡುತ್ತಿರುವ ಕೊಡುಗೆ. **'ಹೊಳೆ ನೀರಿಗೆ ದೊಣ್ಣೆನಾಯಕನ ಅಪ್ಪಣೆಯೇ?'** ಎನ್ನುವ ಆಡು ಮಾತಿಗೇ ಅಪವಾದ ಬಂದು ಕೂತಿದ್ದು, ಇದರ ಫಲವಾಗಿ ನದಿ, ಹೊಳೆ ನೀರನ್ನು ಬಳಸಿಕೊಳ್ಳಲು ಈಗ ಕಚ್ಚಾಟ

ನಡೆಯುತ್ತಿದೆ. ಆದರೆ ಮಳೆರಾಯನ ಬಳಕೆ ಬಗ್ಗೆ ಆ ದುಸ್ಥಿತಿ ನಮಗಿನ್ನೂ ಎದುರಾಗಿಲ್ಲ ಇದು ನಮ್ಮ ಪುಣ್ಯ.

ನಮ್ಮ ಮನೆ ಸೂರಿನ ಮೇಲೆ ಬೀಳುವ ಮಳೆರಾಯನನ್ನು ಮನೆಯೊಳಗೆ ಕರೆದುಕೊಂಡು ನೀರಿನ ಬರ ತೀರಿಸಿಕೊಳ್ಳಲು ಯಾವ ತೊಂದರೆಯೂ, ಯಾರಿಂದ ಅಡ್ಡಿಯೂ ಒದಗಿಲ್ಲ! ಅಂದರೆ ಮಳೆನೀರನ್ನು ಹಿಡಿದು ಬಳಸಿಕೊಳ್ಳಲು ಇದು ಸಕಾಲ. ಅದಕ್ಕಾಗಿ ಇಂದು ಊರು ಊರಿನಲ್ಲೂ ಮಳೆನೀರಿನ ಬಳಕೆ ಹಾಗೂ ಅನಿವಾರ್ಯತೆ ಬಗ್ಗೆ ಅರಿವು ಮೂಡಬೇಕಿದೆ. ಅದಕ್ಕಾಗಿ ಒಂದಷ್ಟು ಚಟುವಟಿಕೆಗಳು ಆರಂಭಗೊಳ್ಳಬೇಕಿದೆ. ಇದರಿಂದ ನಮಗೆ ಆಗುವ ಉಪಯೋಗದ ಬಗ್ಗೆ ತಿಳಿಯಬೇಕಿದೆ.

ಮನೆಮನೆಯಲ್ಲಿ ಭಾವಣಿ ಮಳೆ ನೀರು ಸಂಗ್ರಹಿಸಿದರೆ ಮನೆಯ ದಿನ ಬಳಕೆಗೆ ಆಗುತ್ತದೆ. ಇದೇ ಮಳೆ ನೀರನ್ನೂ ಮನೆಯಲ್ಲಿರುವ ತೆರೆದ ಬಾವಿಗೆ ಬಿಟ್ಟು ಹಿಂಗಿಸಿದರೆ ಅಂತರ್ಜಲ ಹೆಚ್ಚುತ್ತದೆ. ಸಾಮೂಹಿಕವಾಗಿ ಮಳೆನೀರು ಸಂಗ್ರಹಿಸಿದರೆ ಇಡೀ ಸಮುದಾಯದ ಬಳಕೆಗೆ ಮಳೆನೀರು ದಕ್ಕುತ್ತದೆ. ಮಳೆನೀರನ್ನು ಕೆರೆಕಟ್ಟೆಗಳಲ್ಲಿ ಸಂಗ್ರಹಿಸುವ ಪರಿಣಾಮಕಾರಿ ಪ್ರಯತ್ನಗಳನ್ನು ಸಾಮೂಹಿಕವಾಗಿ ಕೈಗೆತ್ತಿ ಕೊಳ್ಳಬಹುದು. ಊರಿನ ಕೃಷಿ ಚಟುವಟಿಕೆಗಳಿಗೆ ಮಳೆನೀರನ್ನು ಸಂಗ್ರಹಿಸಿ ಬಳಸಿಕೊಳ್ಳಬಹುದು. ಕೈಗಾರಿಕೆಗಳ ಆದ್ಯತೆಗಳಿಗೆ ಬೇಕಾಗುವ ನೀರನ್ನು ಮಳೆಯಿಂದ ಭರಿಸಿಕೊಳ್ಳಬಹುದು. ಇಂದು ರಾಜ್ಯದಲ್ಲಿ ಚಾಲನೆಯಲ್ಲಿರುವ ಮುಂದುವರಿಕೆ ಶಿಕ್ಷಣ ಕೇಂದ್ರಗಳು ಹತ್ತು ಹಲವು ಕಾರ್ಯಕ್ರಮಗಳನ್ನು ನಿರ್ವಹಿಸುವ ಬಹು ಮುಖಿ ಕೇಂದ್ರಗಳು. ಅವುಗಳಲ್ಲಿ ಈ ಚಟುವಟಿಕೆಯನ್ನು ಅಳವಡಿಸಿ ನಿರ್ವಹಿಸುವುದನ್ನು ಗುರಿಯಾಗಿಟ್ಟು ಈ ಹಿನ್ನಲೆ ನೀಡಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಪ್ರತಿ ಹಳ್ಳಿಗಳಲ್ಲಿರುವ ಮುಂದುವರಿಕೆ ಶಿಕ್ಷಣ ಕೇಂದ್ರಗಳ ಮತ್ತು ಅದರ ಉಸ್ತುವಾರಿ ವಹಿಸಿರುವ ಪ್ರೇರಕರ ಜವಾಬ್ದಾರಿ ತುಂಬಾ ಹೆಚ್ಚಿನದು. ಪ್ರತಿ ಮುಂದುವರಿಕೆ ಶಿಕ್ಷಣ ಕೇಂದ್ರ ಆದ್ಯತೆಯ ಮೇಲೆ ಕುಡಿಯುವ ಹಾಗೂ ದಿನ ಬಳಕೆಯ ನೀರಿನ ಕೊರತೆ ಉಂಟಾಗದಂತೆ ಇರುವ ಮಾರ್ಗೋಪಾಯಗಳನ್ನು ಹುಡುಕಿ ಗ್ರಾಮಸ್ಥರ ನೆರವಿನೊಂದಿಗೆ ಭಾವಣಿ ಮಳೆನೀರಿನ ಕುರಿತು ಕೆಲಸ ಮಾಡಬೇಕಿದೆ.

ವಯಸ್ಕರ ಶಿಕ್ಷಣದಲ್ಲಿ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ ಒಂದು ಪ್ರಮುಖ ಘಟ್ಟವಾಗಿದೆ. ಮುಂದುವರಿಕೆ ಶಿಕ್ಷಣ ಕೇಂದ್ರ ಗ್ರಾಮದ ಚಟುವಟಿಕೆಗಳ ಕೇಂದ್ರವಾಗಿದ್ದುಕೊಂಡು ಜನರ ಸಾಂಘಿಕ ಪ್ರಯತ್ನದ ಬೀಜ ಮೊಳಕೆಯೊಡೆಯುವಂತೆ ನೋಡಿಕೊಳ್ಳುವ ಒಂದು ನಿರ್ಣಾಯಕ ಘಟ್ಟವಾಗಿದೆ. ಮುಂದುವರಿಕೆ ಶಿಕ್ಷಣ ಕೇಂದ್ರ ಜನರ ಜೀವನ ಶಿಕ್ಷಣ ಕೇಂದ್ರ ವಾಗಿ ಅರ್ಥಪೂರ್ಣ ಕಾರ್ಯ ಮಾಡಲು ಜನ್ಮ ತಾಳಿದೆ. ಜನರಿಗೆ ಬೇಕಾದ ಎಲ್ಲಾ ಮಾಹಿತಿಗಳು ಹಾಗೂ ಅರಿವನ್ನು ನೀಡುವುದರ ಮೂಲಕ ಅವುಗಳಿಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಪ್ರೇರೇಪಣೆ ನೀಡುವುದು ಅದರ ಆದ್ಯ ಕರ್ತವ್ಯ. ಈ ಎಲ್ಲಾ ಚಟುವಟಿಕೆಗಳಿಗೆ ಚಾಲನೆ ನೀಡುವವರು ಪ್ರೇರಕರು. ಆದ್ಯತೆಯಲ್ಲಿ ಭಾವಣಿ ಮಳೆನೀರಿನ ಚಟುವಟಿಕೆಯನ್ನು ಕೈಗೆತ್ತಿಕೊಳ್ಳಬೇಕಾದ್ದು ಅವರ ಕರ್ತವ್ಯ.

ಆದ್ಯತೆಯಲ್ಲಿ ಭಾವಣಿ ಮಳೆನೀರಿನ ಚಟುವಟಿಕೆಯನ್ನು ಕೈಗೆತ್ತಿಕೊಳ್ಳಬೇಕಾದ್ದು ಅವರ ಕರ್ತವ್ಯ. ಜನರ ಬದುಕಿನಲ್ಲಿ ಬದಲಾವಣೆ ತರುವ ಇವು ಕಾರ್ಯಕ್ರಮಗಳಾಗಿದ್ದು ಇವನ್ನು ಕೇಂದ್ರದ ಮೂಲಕ ಹಮ್ಮಿಕೊಳ್ಳುವ ಪ್ರೇರಕರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ.

## ಅಳವಡಿಕೆ ಹೇಗೆ ?

ಮಳೆ ನೀರಿನ ಬಳಕೆಯ ತಂತ್ರಗಳನ್ನು ಕುರಿತು ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರದ ಮಟ್ಟದಲ್ಲಿ ನೋಡಲ್ ಪ್ರೇರಕ ತನ್ನ ವ್ಯಾಪ್ತಿಗೆ ಸೇರಿದ ಇತರ 10 ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ಒಳಗೊಂಡಂತೆ ಮಳೆ ನೀರು ಬಳಕೆಯ ಕುರಿತು ಇರುವ ತಂತ್ರಜ್ಞಾನಗಳನ್ನು ಅಳವಡಿಸಿ ಜನಪ್ರಿಯಗೊಳಿಸುವುದು ಹೇಗೆ ಎಂಬುದನ್ನು

ಅರಿತುಕೊಳ್ಳಬೇಕು. ಇದಕ್ಕೆ ಇಲ್ಲಿ ವಿವಿಧ ಹಂತಗಳಲ್ಲಿ ಈ ಚಟುವಟಿಕೆಯನ್ನು ಪರಿಚಯ ಮಾಡಿದೆ. ಒಂದು ಮುಂದುವರಿಕೆ ಶಿಕ್ಷಣ ಕೇಂದ್ರದಲ್ಲಿ ಈ ಚಟುವಟಿಕೆಗೆ ಒಂದು ಸಾಂಸ್ಥಿಕ ಸ್ವರೂಪ ನೀಡಿ, ಅದನ್ನು ಒಂದು ಸಂಘಟನಾ ಚಟುವಟಿಕೆಯಾಗಿ ನಿರ್ವಹಿಸಿದ್ದಲ್ಲಿ ಅದು ಇತರರಿಗೂ ಮಾದರಿಯಾಗುತ್ತದೆ. ಈ ನಿಟ್ಟಿನಲ್ಲಿ ಈ ಕೆಳಕಂಡ ಹಂತಗಳನ್ನು ಅವಲೋಕಿಸಬೇಕು.

## ಮೊದಲ ಹಂತ

ತರಬೇತಿ ಪಡೆದ ನೋಡಲ್ ಪ್ರೇರಕಿ/ ಪ್ರೇರಕರು ಪ್ರಾರಂಭ ದಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳಬಹುದಾಗಿರುತ್ತದೆ.

**ಅ.** ಪ್ರಾರಂಭದಲ್ಲಿ ಇತರ ಕೇಂದ್ರಗಳ ಪ್ರೇರಕರು ಮತ್ತು ನೋಡಲ್ ಕೇಂದ್ರದ ವ್ಯಾಪ್ತಿಯ ಆಸಕ್ತರು, ಶಿಕ್ಷಕರು, ವಿವಿಧ ಸಮಿತಿಯ ಸದಸ್ಯರನ್ನು ಕರೆದು ಮಳೆನೀರು ಬಳಕೆ ಬಗ್ಗೆ ಪ್ರಸ್ತಾವಿಕವಾಗಿ ವಿಷಯ ಹಂಚಿಕೆ ಮಾಡಿಕೊಳ್ಳಬೇಕು.

**ಆ.** ನಂತರ ಆಸಕ್ತರು ಒಂದೆಡೆ ಸೇರಿ ಮಳೆ ನೀರುಸಂಘ ರಚನೆಯಲ್ಲಿ ಅನುಸರಿಸ ಬಹುದಾದ ಚಟುವಟಿಕೆಗಳು, ಭಾಗವಹಿಸುವಿಕೆ, ಜವಾಬ್ದಾರಿ ಹಂಚಿಕೆ ಸಂಘದ ರಚನೆ ಇತ್ಯಾದಿಗಳನ್ನು ತೀರ್ಮಾನಿಸಬೇಕು.

**ಇ.** ಇದಾದ ನಂತರ ಪ್ರಾರಂಭದಲ್ಲಿ ನೋಡಲ್ ಕೇಂದ್ರದ ವ್ಯಾಪ್ತಿಯಲ್ಲಿರುವ ಮನೆ ಮನೆಗಳಿಗೆ ಭೇಟಿ ನೀಡಿ ಪ್ರೇರಕ ಹಾಗೂ ಸಂಘದ ಸದಸ್ಯರು ಮನೆ ಮನೆಗೆ ಛಾವಣಿ ಮಳೆನೀರು ಬಳಕೆ ಮಾಡಿಕೊಳ್ಳುವುದರ ಕುರಿತು ಮಾತನಾಡಬೇಕು.

**ಈ.** ಯಾವುದೇ ಮನೆಯವರು ಆಸಕ್ತಿ ತೋರಿದಲ್ಲಿ ಹಂತ ಹಂತವಾಗಿ ಮನೆಗೆ ಹೇಗೆ ತಂತ್ರಜ್ಞಾನವನ್ನು ಅಳವಡಿಸಬಹುದು ಎನ್ನುವುದನ್ನು ಸಚಿತ್ರವಾಗಿ ಮನೆಯವರಿಗೆ ಮನವರಿಕೆ ಮಾಡಿಕೊಡಬೇಕು.

**ಉ.** ಹೀಗೆ ಕಾರ್ಯ ಚಟುವಟಿಕೆ ನಡೆಸುವಾಗ ಸಾಧ್ಯವಾದಷ್ಟು ಅಲ್ಪ ವೆಚ್ಚದಲ್ಲಿ, ಸ್ಥಳೀಯ ವಾಗಿ ದೊರೆಯುವ ಸಾಮಗ್ರಿಗಳನ್ನು ಅಂದರೆ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಬೇಕಾಗುವ ಕಲ್ಲು ಜೆಲ್ಲಿ ಮರ ಇತ್ಯಾದಿಗಳನ್ನು ಹೊಂದಿಸಿಕೊಳ್ಳುವಂತೆ ತಿಳಿಸಬೇಕು.

**ಊ.** ಬಹು ಮುಖ್ಯವಾಗಿ ಗಟರ್ಸ್‌ಗಳ ನಿರ್ಮಾಣ ಶೋಧಕ ಜಾಲರಿ ಅಳವಡಿಕೆ ಹಾಗೂ ಸುಭದ್ರವಾದ ಟ್ಯಾಂಕಿನ ಕಟ್ಟಡ ಇತ್ಯಾದಿಗಳಿಗೆ ಆದ್ಯತೆ ನೀಡಿ. ಉತ್ತಮವಾಗಿ ಮೂಡಿಬರುವಂತೆ ನೋಡಿಕೊಳ್ಳಬೇಕು.

**ಋ.** ಪ್ರಾರಂಭದಲ್ಲಿ ಕನಿಷ್ಠ 5000 ಲೀಟರ್ ಸಾಮರ್ಥ್ಯದ ನೀರು ಸಂಗ್ರಹಗಾರವನ್ನು ನಿರ್ಮಿಸಲು ಪ್ರಯತ್ನಿಸಿ. ನಂತರ ಇದರ ಅನುಭವದ ಆಧಾರದ ಮೇಲೆ ಹೆಚ್ಚಿನ ಸಾಮರ್ಥ್ಯದ ಟ್ಯಾಂಕ್ ನಿರ್ಮಾಣ ಸಾಧ್ಯವಾಗುತ್ತದೆ.

**ಎ.** ಗಟರ್ ಹಾಗೂ ಟ್ಯಾಂಕಿನ ನಿರ್ಮಾಣಕ್ಕೆ ಸ್ಥಳೀಯರಾದ ಪ್ಲಂಬರ್‌ಗಳು, ನಲ್ಲಿ ಕೆಲಸದಲ್ಲಿ ನುರಿತವರು ಹಾಗೂ ಗಾರೆ ಕೆಲಸದವರನ್ನು ಬಳಸಿಕೊಳ್ಳಿ. ಇದರಿಂದ ವೆಚ್ಚ ಕಡಿಮೆಯಾಗುತ್ತದೆ. ಅಲ್ಲದೆ ಈ ಕೆಲಸಗಾರರೇ ಹಳ್ಳಿಯಲ್ಲಿ ನಿರ್ಮಾಣ ವಾಗುವ ಇನ್ನಿತರ ಟ್ಯಾಂಕ್‌ಗಳನ್ನು ಇನ್ನೂ ಹೆಚ್ಚು ಸಾಮರ್ಥ್ಯವಾಗಿ ಕಟ್ಟಲು ಸಾಧ್ಯವಾಗುತ್ತದೆ. ಇದರಿಂದ ನಗರ ಪ್ರದೇಶಗಳಿಂದ ದುಬಾರಿ ಕೂಲಿ ಕೊಟ್ಟು ಕೆಲಸಗಾರರನ್ನು ಕರೆಸಿಕೊಳ್ಳುವುದು ತಪ್ಪುತ್ತದೆ.

## ಎರಡನೇ ಹಂತ

ಇದು ಬಹು ಮುಖ್ಯವಾದ ಹಂತವಾಗಿರುತ್ತದೆ. ಏಕೆಂದರೆ ಹೀಗೆ ನೋಡಲ್ ಕೇಂದ್ರದ ವ್ಯಾಪ್ತಿಯಲ್ಲಿ ನೀವು ನಿರ್ಮಾಣ ಮಾಡಿದ ಛಾವಣಿ ಮಳೆ ನೀರು ಸಂಗ್ರಹದ ಮಾದರಿ ಸುತ್ತಲಿನ ಗ್ರಾಮಗಳಿಗೆ ಮಾದರಿಯಾಗುತ್ತದೆ. ಈ ಹಂತದಲ್ಲಿ ಕೆಳಕಂಡ ಚಟುವಟಿಕೆಗಳನ್ನು ನಡೆಸಬಹುದಾಗಿರುತ್ತದೆ.

ತರಬೇತಿ ಪಡೆದ ನೋಡಲ್ ಪ್ರೇರಕರು ಪ್ರಾರಂಭದಲ್ಲಿ ಈ ಕೆಳಕಂಡ ಚಟುವಟಿಕೆ ಗಳನ್ನು ಹಂತ ಹಂತವಾಗಿ ಹಮ್ಮಿ ಕೊಳ್ಳ ಬಹುದಾಗಿರುತ್ತದೆ.

**ಅ.** ನಿರ್ಮಾಣ ಮಾಡಿದ ಛಾವಣಿ ಮಳೆ ನೀರು ಸಂಗ್ರಹದ ಮಾದರಿ ಮನೆಯನ್ನು ಇತರ ಗ್ರಾಮಸ್ಥರು, ಪಕ್ಕದ ಗ್ರಾಮದ ಜನರು ಬಂದು ನೋಡುವಂತೆ ಪ್ರಚಾರ ಮಾಡಿ.

**ಆ.** ಸಾಧ್ಯವಾದರೆ ಮಾದರಿಯ ಮನೆಯ ಛಾಯಾಚಿತ್ರ ಹಾಗೂ ಒಂದು ವರದಿಯನ್ನು ಸಿದ್ಧಪಡಿಸಿ ಸ್ಥಳೀಯ ದಿನಪತ್ರಿಕೆಗಳಿಗೆ ಪ್ರಕಟಣೆಗಾಗಿ ಕಳುಹಿಸಿಕೊಡಿ.

**ಇ.** ಜಿಲ್ಲಾ ಸಾಕ್ಷರತಾ ಸಮಿತಿಯ ಗಮನಕ್ಕೆ ಈ ಚಟುವಟಿಕೆಯ ವರದಿಯನ್ನು ಕಳುಹಿಸಿಕೊಡಿ.

**ಈ.** ಊರಿನಲ್ಲಿ ಅಥವಾ ಸುತ್ತಲಿನ ಗ್ರಾಮಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ರೇಖಾ ನಕ್ಷೆ ಸಿದ್ದಪಡಿಸಿ ಜಾತ್ರೆಗೆ ಬರುವ ಜನರಿಗೆ ಇದರ ಕುರಿತು ಮಾಹಿತಿ ನೀಡುವ ಪ್ರಯತ್ನಮಾಡಿ.

**ಉ.** ಛಾವಣಿ ಮಳೆ ನೀರಿಲ್ಲದೆ ಅಂತರ ಜಲ ಹೆಚ್ಚಿಸಲು ನಿರ್ಮಿಸುವ ಗುಂಡಿಗಳು, ಒಣಗಿದ ಭಾವಿಗಳಲ್ಲಿ ಮಳೆ ನೀರು ಹಿಂಗಿಸುವ ವಿಧಾನ, ಕೃಷಿ ಗುಂಡಿಗಳನ್ನು ನಿರ್ಮಿಸುವುದು ಇತ್ಯಾದಿಗಳನ್ನು ಜಾತ್ರೆಗಳಲ್ಲಿ ನಿರಂತರ ಶಿಕ್ಷಣ ಕೇಂದ್ರ ಗಳಲ್ಲಿ ಮಾಹಿತಿ ನೀಡಿರಿ.

**ಊ.** ನೋಡಲ್ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ 10 ಕೇಂದ್ರಗಳಲ್ಲಿ ಮಾದರಿ ಛಾವಣಿ ಮಳೆ ನೀರು ಸಂಗ್ರಹದ ಭಿತ್ತಿ ಚಿತ್ರ ಅಥವಾ ಚಾರ್ಟ್‌ನ್ನು ತಯಾರಿಸಿಡಿ. ಇದರಿಂದ ಜನರಿಗೆ ಪ್ರಚಾರ ಹಾಗೂ ಮಾಹಿತಿ ನೀಡಿದಂತಾಗುತ್ತದೆ.

**ಋ.** ಛಾವಣಿ ಮಳೆ ನೀರು ಸಂಗ್ರಹ ಮತ್ತು ಬಳಕೆ ಕಾರ್ಯಚಟುವಟಿಕೆಯಲ್ಲಿ ಭಾಗವಹಿಸುವಾಗ ಸಂಘದ ಪ್ರತಿನಿಧಿಗಳು ಅಥವಾ ಸದಸ್ಯರುಗಳು ತಮಗೆ ನೀಡಿರುವ ನೀಲಿ ಚೌಕವನ್ನು (ಜಲಯೋಧ) ಕಡ್ಡಾಯವಾಗಿ ಧರಿಸಿಕೊಂಡು ಆಯ್ದ ಊರುಗಳಲ್ಲಿ **'ನೀರಿಗಾಗಿ ಪಾದಯಾತ್ರೆ'** ಅಥವಾ **'ನೀರಿಗಾಗಿ ನಡಿಗೆ'** ಯನ್ನು ಕೈಗೊಳ್ಳಿ.

## ಮೂರನೇ ಹಂತ

ಈ ಹಂತದಲ್ಲಿ ನೀವು ಇದುವರೆಗೆ ಕೈಗೊಂಡ ಮಾದರಿ ಛಾವಣಿ ಮಳೆ ನೀರು ಸಂಗ್ರಹ ಮತ್ತು ನೀರಿಗಾಗಿ **ಪಾದಯಾತ್ರೆ** ಇತ್ಯಾದಿ ಚಟುವಟಿಕೆಗಳಿಂದ ಜನರ ಆಸಕ್ತಿ, ಕುತೂಹಲ ಸಹಜವಾಗಿ ಹೆಚ್ಚಿರುತ್ತದೆ. ನಿಮ್ಮ ನಿರೀಕ್ಷೆಗೂ ಮೀರಿ ಜನರು ಈ ಕುರಿತು ಪ್ರತಿಕ್ರಿಯಿಸಬಹುದು ಅಥವಾ ಹೆಚ್ಚಿನ ಮಾಹಿತಿ ಕೇಳಬಹುದು. ಜನರ ಈ ಕುತೂಹಲವನ್ನು ತಣಿಸುವುದರ ಬಗ್ಗೆ ಕಾರ್ಯ ಚಟುವಟಿಕೆಗಳನ್ನು ಗ್ರಾಮ ಶಿಕ್ಷಣ ಸಮಿತಿ, ಪಂಚಾಯಿತಿಯ ಸಹಕಾರ ಅಥವಾ ತಾಲ್ಲೂಕು, ಗ್ರಾಮ ಹಾಗೂ ಜಿಲ್ಲಾ ಸಾಕ್ಷರತಾ ಸಮಿತಿಯ ಸಹಕಾರ ಸಹಾಯದೊಂದಿಗೆ ಹಮ್ಮಿಕೊಳ್ಳ ಬಹುದೇ ಯೋಚಿಸಿ. ಅವು ಗಳಲ್ಲಿ ಪ್ರಮುಖವಾದ ಚಟುವಟಿಕೆಗಳು ಹೀಗಿವೆ.

**ಅ.** ಸ್ಥಳೀಯವಾಗಿ ಅಥವಾ ಜಿಲ್ಲೆಯ ಇತರೆಡೆಗ ಳಲ್ಲಿ ಲಭ್ಯವಾಗುವ ಮಳೆ ನೀರು ತಜ್ಞ ರನ್ನು ಕರೆಸಿ ಅವರಿಂದ ನೋಡಲ್ ಕೇಂದ್ರದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಉಪನ್ಯಾಸ ಏರ್ಪಡಿಸಲು ಸಾಧ್ಯವೇ ಯೋಚಿಸಿ.

**ಆ.** ಮಳೆ ನೀರು ಬಳಕೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಜ್ಞರು ಸಂಸ್ಥೆಗಳನ್ನು ಸಂಪರ್ಕಿಸಿ ಅವರಿಂದ ಲಭ್ಯವಿರುವ ಮಾಹಿತಿಗಳನ್ನು ತರಿಸಿಕೊಳ್ಳಿ.

**ಇ.** ಅಲ್ಲದೆ ಮಳೆ ನೀರು ಬಳಕೆ ಬಗ್ಗೆ ಈಗ ಅನೇಕ ಪ್ರಯೋಗಗಳು ನಡೆಯುತ್ತಿವೆ. ಅವುಗಳ ಕುರಿತು ವರದಿಗಳು ನಿಯತಕಾಲಿಕೆಗಳಲ್ಲಿ ದಿನಪತ್ರಿಕೆಗಳಲ್ಲಿ ಬರುತ್ತಿವೆ. ಅವುಗಳನ್ನು ನೀವು ಸಂಗ್ರಹಿಸಿ ದಾಖಲಾತಿ ಮಾಡಿ. ಇವುಗಳ ಕುರಿತು ಇತರರೊಡನೆ ಚರ್ಚಿಸಿ. ಅವುಗಳ ಅಳವಡಿಕೆಗೆ ಪ್ರಯತ್ನಿಸಿ.

ಈ. ಈ ಹಂತದಲ್ಲಿ ನೀವು ಮುಖ್ಯವಾಗಿ ಮಾಡ ಬಹುದಾದ ಕಾರ್ಯ ಇನ್ನೊಂದಿದೆ. ಅದು ನಿಮ್ಮ ಜಿಲ್ಲೆಯ ಇತರೆಡೆ ಕಾರ್ಯ ನಿರ್ವಹಿಸುತ್ತಿರುವ ನಿಮ್ಮ ಗೆಳೆಯರಾದ ಇತರ ನೋಡಲ್ ಪ್ರೇರಕರೊಡನೆ ಸಮಯ ಸಿಕ್ಕಾಗ ನಿಮ್ಮ ಮಳೆ ನೀರಿನ ಅನುಭವವನ್ನು ಹಂಚಿಕೊಳ್ಳಿ. ಅಥವಾ ಕಾಗದ ಬರೆಯುವುದರ ಮೂಲಕ ಈ ವಿಷಯವನ್ನು ಹಂಚಿಕೊಳ್ಳಿ. ಜನರಿಂದ ಅಥವಾ ದಾನಿಗಳಿಂದ ಈ ಉದ್ದೇಶಕ್ಕಾಗಿ ಬಳುವಳಿಯಾಗಿ ಕಾರ್ಡು ಪಡೆದು ಮಳೆ ನೀರು ಬಳಕೆಯ ಪ್ರಚಾರಕ್ಕೆ ಒತ್ತು ನೀಡಬಹುದೆ ಯೋಚಿಸಿ.

## ಪ್ರಾಯೋಗಿಕ ಕಾರ್ಯಕ್ರಮದ ಚಿತ್ರಣ

ಮೇಲ್ಕಂಡ ವಿವರಗಳಂತೆ ಒಂದು ಪ್ರಾಯೋಗಿಕ ಕಾರ್ಯವನ್ನು ಮೊದಲು ರೂಪಿಸಿ, ಅನುಷ್ಠಾನಗೊಳಿಸಿ. ಅದರ ಯಶಸ್ಸು ಇತರರಿಗೂ ಮಾದರಿಯಾಗಿ, ನಿರ್ವಹಿಸುವ ನಿಮಗೂ ವಿಶೇಷ ನಂಬಿಕೆ ತರಬಲ್ಲದು. ಈ ಪ್ರಾಯೋಗಿಕ ಚಿತ್ರಣದ ವಿವರ ಈ ಕೆಳಕಂಡಂತಿವೆ.

ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರವೊಂದರ ಸಾಮುದಾಯಿಕ ಪ್ರಯತ್ನದ ಮೂಲಕ ಒಬ್ಬ ಬಡ ರೈತನೊಬ್ಬನ ಮನೆಗೆ ಅಥವಾ ಅಂಗನವಾಡಿ, ಗ್ರಾಮ ಪಂಚಾಯಿತಿ, ದೇವಸ್ಥಾನ ಇತ್ಯಾದಿ ಕಟ್ಟಡಗಳಿಗೆ ಪುಟ್ಟ ಮಳೆ ನೀರು ಸಂಗ್ರಹ ಬಳಕೆ ಕಾರ್ಯಕ್ರಮವನ್ನು ಅಳವಡಿಸುವುದರ ಕುರಿತು ಇರುವ ಸಾಧ್ಯತೆಗಳನ್ನು ಇಲ್ಲಿ ಪರಿಶೀಲಿಸೋಣ.

## ಮೊದಲ ಹಂತ

ಮೊದಲಿಗೆ ನಾವು ಯಾವ ಕಟ್ಟಡಕ್ಕೆ ಮಳೆ ನೀರು ಸಂಗ್ರಹದ ತಂತ್ರಜ್ಞಾನ ಅಳವಡಿಸ ಬೇಕು ಎಂಬುದನ್ನು ನಿರ್ಧರಿಸ ಬೇಕು. ಇಲ್ಲಿ ಒಂದು ಖಾಸಗಿ ಬಡ ರೈತನ ಮನೆಯನ್ನು ಉದಾಹರಣೆ ಯಾಗಿ ತೆಗೆದು ಕೊಳ್ಳೋಣ. ಈ ಹಂತದಲ್ಲಿ ಕೈಗೊಳ್ಳಬೇಕಾದ ಕೆಲವು ತೀರ್ಮಾನಗಳು ಹೀಗಿರಬಹುದು.

ಅ. ರೈತನ ಮನವೊಲಿಸಿ ಇದರ ಅಳವಡಿಕೆಗೆ ಒಪ್ಪಿಗೆ ಪಡೆಯಬಹುದು.

ಆ. ರೈತನಿಂದ ದೊರೆಯ ಬಹುದಾದ ಸೌಕರ್ಯ ಸಾಮಗ್ರಿಗಳ ಒಂದು ಪಟ್ಟಿ ಮಾಡಿ. ಉದಾ ಟ್ಯಾಂಕ್ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗುವ ಇಟ್ಟಿಗೆ, ಕಲ್ಲು, ಮರಳು ಇತ್ಯಾದಿಗಳನ್ನು ಆತ ಭರಿಸಲು ಸಾಧ್ಯವೇ ಎಂದು ಪರಿಶೀಲಿಸಿ.

ಇ. ಉಳಿಕೆ ವೆಚ್ಚದ ಬಾಬ್ತು ಎಂದರೆ ಕಟ್ಟಡಕ್ಕೆ ಬೇಕಾಗಿರುವ ಸೀಮೆಂಟ್ ಹಾಗೂ ಗಟರ್ಸ್‌ಗಳ ಬಳಕೆಗಾಗಿ ಕೊಳ್ಳುವ ಪಿ.ವಿ.ಸಿ ಪೈಪ್‌ಗಳ ವೆಚ್ಚ ಅಂದಾಜು ಮಾಡಿ ಪಟ್ಟಿಮಾಡಿ.

ಈ. ಈ ವೆಚ್ಚಗಳಲ್ಲಿ ಆ ರೈತನೆಷ್ಟು ಭರಿಸಬಲ್ಲ ಎಂಬುದನ್ನು ಪಟ್ಟಿ ಮಾಡಿ. ಉಳಿಕೆ ಹಣ ಎಷ್ಟು ವೆಚ್ಚವಾಗುತ್ತದೆ ಎಂದು ಅಂದಾಜು ಮಾಡಿ.

ಈಗ ನಿಮಗೆ ಕನಿಷ್ಠ 5000 ಲೀಟರ್ ಸಂಗ್ರಹ ಸಾಮರ್ಥ್ಯ ಟ್ಯಾಂಕ್ ನಿರ್ಮಾಣ ಮತ್ತು ಗಟರ್ಸ್‌ಗಳ ವೆಚ್ಚದ ಪೂರ್ಣ ಅಂದಾಜು ವೆಚ್ಚದ ವಿವರ ನಿಮಗೆ ಲಭ್ಯವಾಗುತ್ತದೆ.

## ಎರಡನೇ ಹಂತ

ಅ. ಈ ಚಟುವಟಿಕೆಗೆ ರೈತನಿಂದ ಹಾಗೂ ಇತರರು ದಾನವಾಗಿಕೊಡಬಹುದಾದ ಇಟ್ಟಿಗೆ, ದಿಂಡುಗಲು, ಜೆಲ್ಲಿ, ಮರಳು ಇತ್ಯಾದಿಗಳನ್ನು ಸಂಗ್ರಹಿಸಿಟ್ಟುಕೊಳ್ಳಿ.

ಆ. ಉಳಿಕೆ ವೆಚ್ಚದ ಬಾಬ್ತು ಗಳೆಂದರೆ ಸಿಮೆಂಟ್ ಹಾಗೂ ಗಟರ್ಸ್ ನಿರ್ಮಾಣಕ್ಕಾಗಿ ಕೊಳ್ಳಬೇಕಾದ ಪಿ.ವಿ.ಸಿ. ಪೈಪ್ ಇತ್ಯಾದಿ ವೆಚ್ಚಗಳನ್ನು ಊರಿನ ದಾನಿಗಳಿಂದ ಸಂಗ್ರಹಿಸಿ.

ಇ. ಟ್ಯಾಂಕಿನ ಕೆಲಸವನ್ನು ಊರಿನ ಗಾರೆ ಕೆಲಸದವನಿಂದಲೇ ಮಾಡಿಸಿ.

ಈ. ಗಟರ್ಸ್‌ಗಳ ನಿರ್ಮಾಣದಲ್ಲಿ ಅಗತ್ಯವಿದ್ದಲ್ಲಿ ಒಳ್ಳೆ ತಗಡಿನ ಹಾಳೆಯನ್ನು ಬಳಸಬಹುದು. ಶೋಧಕ ಜಾಲರಿಗಳನ್ನು ಸ್ಥಳೀಯ ಕಬ್ಬಿಣದ ಕೆಲಸದವನಿಂದ ಮಾಡಿಸಿ. ಆಗ ವೆಚ್ಚವೂ ಕಡಿಮೆಯಾಗು ವುದು. ಅದರ ತಂತ್ರಜ್ಞಾನವು ಸ್ಥಳೀಯವಾಗಿ ಅವಲಂಬನೆ ತಪ್ಪುತ್ತದೆ.

## ಮೂರನೇ ಹಂತ

ಅ. ಈ ಹಂತದಲ್ಲಿ ಟ್ಯಾಂಕಿನ ನಿರ್ಮಾಣವನ್ನು ಎಚ್ಚರಿಕೆಯಿಂದ ಮಾಡಿ. ಟ್ಯಾಂಕ್ ಸುಭದ್ರವಾಗಿರಲಿ.

ಆ. ಗಟರ್ಸ್‌ಗಳ ಅಳವಡಿಕೆಯಲ್ಲಿ ಮುನ್ನೆಚ್ಚರಿಕೆ ವಹಿಸಿರಿ. ಇದರಿಂದ ಗಟರ್ಸ್‌ನ ನೀರು ಸಲೀಸಾಗಿ ಶೋಧಕ ಜಾಲರಿ ಮೂಲಕ ಟ್ಯಾಂಕ್ ಸೇರುತ್ತದೆ.

ಇ. ತಜ್ಞರನ್ನು ಆಹ್ವಾನಿಸಿ ಟ್ಯಾಂಕನ್ನು ಪರಿಶೀಲಿಸಿರಿ. ಇದರಿಂದ ಆಗಬಹುದಾದ ನ್ಯೂನತೆಗಳನ್ನು ಮೊದಲೇ ಸರಿಪಡಿಸಿಕೊಂಡು ಆಗಬಹುದಾದ ಅನಾವಶ್ಯಕ ವೆಚ್ಚಗಳನ್ನು ತಪ್ಪಿಸಬಹುದು.

## ನಾಲ್ಕನೇ ಹಂತ

ಅ. ಕೆಲಸ ಪೂರ್ಣವಾದ ನಂತರ ಮಳೆ ನೀರನ್ನು ದಿನ ಬಳಕೆಗೆ ಹೇಗೆ ಬಳಸಬಹುದು ಎನ್ನುವ ಬಗ್ಗೆ ರೈತನಿಗೆ ಮನವರಿಕೆ ಮಾಡಿ ಕೊಡಿ.

ಆ. ಮಳೆ ನೀರಿನ ಬಳಕೆಯ ವಿಧಾನವನ್ನು ಅಳವಡಿಸಿದ ಈ ಮಾಹಿತಿಯನ್ನು ನೋಡಲು ಬರುವ ಇತರರಿಗೆ ಮಾಹಿತಿಯನ್ನು ಆ ರೈತನೆ ವ್ಯವಧಾನದಿಂದ ವಿವರಿಸಬೇಕು ಎನ್ನುವುದನ್ನು ಆತನಿಗೆ ಮನವರಿಕೆ ಮಾಡಿಕೊಡಿ.

ಇ. ಕಾರ್ಯಕ್ರಮವನ್ನುಹೆಚ್ಚು ಜನಪ್ರಿಯಗೊಳಿಸಲು ಇದಕ್ಕೊಂದು ಉದ್ಘಾಟನಾ ಸಮಾರಂಭವನ್ನು ಮಾಡಿ. ಊರಿನ ಹಾಗೂ ಅಕ್ಕಪಕ್ಕದ ಊರಿನ ಜನರಿಗೆ ಬಾಯಿ ಮಾತಿನ ಆಹ್ವಾನ ನೀಡಿ ಕರೆಯಿರಿ. ಊರಿನ ಹಿರಿಯರಿಂದ ಉದ್ಘಾಟನೆ ಮಾಡಿಸಿ.

ಇದೊಂದು ಉದಾಹರಣೆ, ಇದಲ್ಲದೆ ಊರಿನ ಸಾರ್ವಜನಿಕ ಕಟ್ಟಡಗಳಾದ ಅಂಗನವಾಡಿ ಪಂಚಾಯಿತಿ ಕಛೇರಿ, ದೇವಸ್ಥಾನ ಮತ್ತಿತರ ಕಟ್ಟಡಗಳಿಗೆ ಸಾರ್ವಜನಿಕ ಚಂದ ಎತ್ತಿ ಕಾರ್ಯಕ್ರಮ ಹಮ್ಮಿ ಕೊಳ್ಳುವುದರ ಕುರಿತು ಕಾರ್ಯಕ್ರಮಕ್ಕೆ ಚಾಲನೆ ನೀಡಬಹುದು.

ಇದಲ್ಲದೆ ಪ್ರತಿ ಮನೆ ಮನೆ ಬಾಗಿಲಿಗೂ ಮಳೆ ನೀರಿನ ಬಳಕೆ ಕುರಿತಂತೆ ಮನೆ ಮನೆಗೆ ಸಂದೇಶ ನೀಡುವುದರ ಮೂಲಕ ಕಾರ್ಯ ಚಟುವಟಿಕೆ ಮಾಡಬಹುದು.

ಈ ಎಲ್ಲಾ ಸಾಧ್ಯತೆಗಳ ಕುರಿತು ಒಂದೆಡೆ ಚಿಂತಿಸುವ, ಪರಸ್ಪರ ಆಲೋಚನೆಗಳನ್ನು ಹಂಚಿಕೊಂಡು ಕಾರ್ಯಪ್ರವೃತ್ತ ರಾಗಲು ಊರಿಗೊಂದು ವೇದಿಕೆ ಅಗತ್ಯ. ಇದಕ್ಕಾಗಿ ಮಳೆನೀರು ಬಳಕೆದಾರ ಸಂಘಗಳನ್ನು ಸ್ಥಾಪಿಸಿಕೊಳ್ಳಬಹುದು, ಎಲ್ಲರೂ ಸಂಘಟಿತರಾಗಿ ಜಲ ಸಂಪತ್ತನ್ನು ಸದ್ಬಳಕೆ ಮಾಡಿಕೊಳ್ಳಲು ಇಂಥ ಸಂಘಟನೆಗಳು ಜರೂರಾಗಿ ಆಗಬೇಕು.

ಭಾರತದಲ್ಲಿ ಸಾಂಪ್ರದಾಯಿಕವಾಗಿ ಹಿಂದಿನಿಂದಲೂ ನಮ್ಮ ಹಿರಿಯರು ಮಳೆ ಅಭಾವವಿರುವೆಡೆಗಳಲ್ಲಿ ಬೀಳುವ ಮಳೆಯ ನೀರನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ ಬಳಸಿಕೊಳ್ಳುವ ಅತ್ಯುತ್ತಮ ವಿಧಾನಗಳನ್ನು ರೂಪಿಸಿರುವುದು ಅನೇಕ ಮೂಲಗಳಿಂದ ನಮಗೆ ತಿಳಿದು ಬರುತ್ತದೆ. ಇವುಗಳ ಜೊತೆಗೆ ಇಂದಿನ ದಿನಗಳಲ್ಲಿ ಆಗಿರುವ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ನೀರಿನ ಅಭಾವವನ್ನು ನೀಗಿಕೊಳ್ಳುವುದಕ್ಕೆ ಇಂದಿನ ಸ್ಥಿತಿಗೆ ತಕ್ಕಂತೆ ಕಾರ್ಯನಿರ್ವಹಿಸಲು **'ಮಳೆನೀರು ಬಳಕೆ ಸಂಘ'**ಗಳು ಬೇಕಿದೆ.

## ಮಳೆ ನೀರು ಬಳಕೆ ಸಂಘ ಎಂದರೇನು?

ಎಲ್ಲೆಡೆ ಬೀಳುವ ಮಳೆ ನೀರನ್ನು ಆಯಾ ಸ್ಥಳಗಳಲ್ಲೇ ಸಂಗ್ರಹಿಸಿ ಬಳಸಿಕೊಳ್ಳಲು ಅನುವಾಗುವಂತೆ ಹಲವು

ಆಸಕ್ತರೆಲ್ಲ ಒಂದೆಡೆ ಸಂಘಟಿತರಾಗಿ ಸೇರಿ ವಿಚಾರ ವಿನಿಮಯ ಮಾಡಿಕೊಂಡು ಪರಿಣಾಮಕಾರಿಯಾದ ತಂತ್ರಜ್ಞಾನಗಳೊಂದಿಗೆ ಬಳಸಿಕೊಂಡು ಮಳೆ ನೀರನ್ನು ಬಳಸಿಕೊಳ್ಳುವ ಒಂದು ಸಮಾನ ಮನಸ್ಕ ಕೂಟವೇ **'ಮಳೆನೀರು ಬಳಕೆ ಸಂಘ'**.

## ಮಳೆ ನೀರು ಸಂಘಗಳ ಸ್ವರೂಪ ಹಾಗೂ ಗುಣ ಲಕ್ಷಣ

ಮಳೆ ನೀರು ಸಂಘಗಳ ಗುಣಲಕ್ಷಣಗಳು ಈ ರೀತಿ ಇರಬಹುದು. ಮಳೆ ನೀರು ಸಂಘಗಳ ಗುರಿಯ ಕೆಲವು ಮಾದರಿಗಳನ್ನು ಈ ಕೆಳಕಂಡಂತೆ ವಿವರಿಸಿದೆ.

- ಮಳೆ ನೀರು ಸಂಘಗಳ ಮುಖ್ಯಗುರಿ ನಾಡಿನ ಏಳಿಗೆಯೇ ಆಗಿರುತ್ತದೆ.
- ನಾಡಿನ ಯಾರೇ ಆದರೂ ಮಳೆ ನೀರಿನ ಸದ್ಬಳಕೆ ಕುರಿತು ಒಂದೆಡೆ ಸೇರಿ ಸಂಘಗಳ ಸ್ಥಾಪಿಸಿಕೊಂಡು ಕಾರ್ಯ ಪ್ರವೃತ್ತರಾಗ ಬಹುದು.
- ಯಾವುದೇ ವಯಸ್ಸಿನ ತಾರತಮ್ಯವಿಲ್ಲದೆ, ಜಾತಿ, ರಾಜಕೀಯ, ಲಿಂಗಭೇದ, ಹಣವಂತ, ಬಡವ ಎಂಬ ತಾರತಮ್ಯವಿಲ್ಲದೆ ಒಂದೆಡೆ ಸೇರಿ ಮಳೆ ನೀರು ಸಂಘಗಳನ್ನು ರಚಿಸಿಕೊಳ್ಳ ಬಹುದಾಗಿರುತ್ತದೆ.
- ಮಳೆನೀರು ಸಂಘಗಳು ಇಂದಿನ ಅಗತ್ಯಗಳಿಗಲ್ಲದೆ ಭವಿಷ್ಯದ ಅಗತ್ಯತೆ ಗಳನ್ನು ಗಮನದಲ್ಲಿಟ್ಟುಕೊಂಡು ನಾಡನ್ನು ಸುಸ್ತಿರ ಅಭಿವೃದ್ಧಿಯತ್ತ ಕೊಂಡೊಯ್ಯ ಬೇಕಾದ ಗುರಿಯನ್ನಿಟ್ಟುಕೊಳ್ಳಬೇಕು.
- ಮಳೆ ನೀರು ಸಂಗ್ರಹ ಮತ್ತು ಬಳಕೆಯ ಕಾಲದಲ್ಲಿ ಪರಿಸರದ ಸಮತೋಲನತೆ ಯನ್ನು ಗಮನದಲ್ಲಿಟ್ಟು ಕೊಂಡು ಕಾರ್ಯ ಪ್ರವೃತ್ತರಾಗಬೇಕು.
- ಮಳೆ ನೀರು ಸಂಗ್ರಹ ಮತ್ತು ಬಳಕೆ ಖಾಸಗೀ ಸ್ಥಳವಾಗಿರಲಿ, ಸಾರ್ವಜನಿಕ ಸ್ಥಳವಾಗಿರಲಿ, ಸರಕಾರದ ಸ್ವತ್ತಾಗಿರಲಿ ಆಯಾ ಸಂಬಂಧಿಸಿದ ಸಂಘ, ಸಂಸ್ಥೆಗಳ ವ್ಯಕ್ತಿಗಳ ಒಪ್ಪಿಗೆಯ ಮೇಲೆಯೇ ಕಾರ್ಯಗತಗೊಳ್ಳು ವಂತೆ ನೋಡಿಕೊಳ್ಳಬೇಕು.
- ಅನುಷ್ಠಾನಗೊಳ್ಳುವ ಎಲ್ಲಾ ಚಟುವಟಿಕೆಗಳ ಹಿಂದೆ ವೈಜ್ಞಾನಿಕ ಅಂಶಗಳ ಬೆಂಬಲವಿರು ವಂತೆ ನೋಡಿಕೊಳ್ಳ ಬೇಕಾಗುತ್ತದೆ. ಅಥವಾ ಕಾರ್ಯಕ್ರಮಗಳು ತಜ್ಞರ ಅಭಿಪ್ರಾಯ, ಮಾರ್ಗದರ್ಶನಗಳೊಂದಿಗೆ ಕಾರ್ಯಗತ ಗೊಳ್ಳಬೇಕು.
- ಮಳೆನೀರು ಬಳಕೆ ಸಂಘಗಳಿಗೆ ಸದಸ್ಯರಾಗಿ ಬರುವವರಿಗೆ, ಬಯಸುವವರಿಗೆ ಎಲ್ಲರಿಗೂ ತಾರತಮ್ಯವಿಲ್ಲದೆ ಪ್ರವೇಶವಿರುವಂತೆ ನೋಡಿಕೊಳ್ಳಬೇಕು.

ಒಟ್ಟಾರೆ ಮಳೆನೀರು ಸಂಘಗಳು ಕಾರ್ಯನಿರ್ವಹಿಸುವಾಗ ಆಯಾ ಕ್ಷೇತ್ರದಲ್ಲಿ ಕೆಲಸಮಾಡುವ ತಜ್ಞವೆಕ್ತಿಗಳು, ಸಂಘ ಸಂಸ್ಥೆಗಳ ಅಭಿಪ್ರಾಯ ಹಾಗೂ ಸಲಹೆ ಸೂಚನೆಗಳ ಆಧಾರದ ಮೇಲೆ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡಲ್ಲಿ ಹೆಚ್ಚು ಫಲಪ್ರದವಾಗಿರುತ್ತದೆ.

ಸ್ಥಳೀಯವಾಗಿ ಮಳೆನೀರು ಅಥವಾ ನೀರು ನಿರ್ವಹಣೆಯ ಬಗ್ಗೆ ಸಾಂಪ್ರದಾಯಕವಾಗಿ ಚಿಂತಿಸುವ ವ್ಯಕ್ತಿಗಳ ಸಂಘಸಂಸ್ಥೆಗಳ ಮಾರ್ಗದರ್ಶನವನ್ನು ಪಡೆದುಕೊಳ್ಳಬೇಕು. ಅಂಥ ಪರಿಣಿತರೇ ಸಂಘದ ನೇತೃತ್ವವಹಿಸುವಂತೆ ನೋಡಿಕೊಳ್ಳಬೇಕು.

## ಮಳೆ ನೀರು ಸಂಘದ ಪ್ರಮುಖ ಉದ್ದೇಶ

- ಪ್ರಕೃತಿದತ್ತವಾಗಿ ದೊರೆಯುವ ಮಳೆ ನೀರಿನ ಸಂಗ್ರಹ ಮತ್ತು ಬಳಕೆಯ ಕಾರ್ಯಕ್ರಮವನ್ನು ಜನಪ್ರಿಯ ಗೊಳಿಸುವುದು.

- ಮಳೆ ನೀರು ಬಳಕೆಯ ತಂತ್ರಜ್ಞಾನಗಳ ಕುರಿತು ಮಾಹಿತಿ ನೀಡುವುದರ ಮೂಲಕ ಅರಿವು ನೀಡುವ ಕಾರ್ಯಕ್ರಮಗಳನ್ನು ನೀಡುವುದು.

## ಸಂಘದ ಪದಾಧಿಕಾರಿಗಳ ಆಯ್ಕೆ

ಮಳೆನೀರು ಬಳಕೆ ಸಂಘಗಳನ್ನು ರಾಜ್ಯದಲ್ಲಿ ಇಂದು ಅಸ್ತಿತ್ವದಲ್ಲಿರುವ ಮುಂದುವರಿಕೆ ಶಿಕ್ಷಣ ಕೇಂದ್ರಗಳು ಸ್ವಶಕ್ತಿ ಸಂಘಟನೆಗಳು, ಸ್ವಸಹಾಯ ಸಂಘಗಳು ಇತ್ಯಾದಿ ಯಾವುದೇ ಜನಪರ ಯುವಕ, ಯುವತಿ ಮಂಡಲಿಗಳ ಪ್ರತಿನಿಧಿಗಳು ಕೂಡಿ ತಮ್ಮ ಸಂಘಟನೆಗೆ ಅವಶ್ಯವಿರುವವವನ್ನು ಆಯ್ಕೆ ಮಾಡಿಕೊಳ್ಳಬೇಕು. ಛಾವಣಿ ಮಳೆನೀರಿನ ಬಗ್ಗೆ ಪೂರ್ಣ ಮಾಹಿತಿಯಿರುವ ವಿವಿಧ ಸಂಘಟನೆಗಳು ರಚಿಸುವ ತರಬೇತಿಯಲ್ಲಿ ಪಾಲ್ಗೊಂಡು ತರಬೇತಿಯನ್ನು ಪಡೆದುಕೊಳ್ಳಬೇಕು.

## ಸಂಘದ ಪ್ರತಿನಿಧಿಗಳು ಹಾಗೂ ಸದಸ್ಯರು ಯಾರು ?

ಸಂಘ ಯಶಸ್ವಿಯಾಗಿ ನಡೆಯಲು ಜನಪ್ರಿಯ, ಪ್ರಾಮಾಣಿಕ, ಆಸಕ್ತರ ಹಾಗೂ ವಿವಿಧ ಸಂಘಟನೆಗಳ ಹಾಗು ಕ್ಷೇತ್ರಗಳ ವ್ಯಕ್ತಿಗಳನ್ನು ಮನವೊಲಿಸಿ ಸಂಘದ ಸಕ್ರೀಯ ಸದಸ್ಯರನ್ನಾಗಿಸಿಕೊಳ್ಳಬೇಕು.

1. ಕಾರ್ಯದರ್ಶಿ/ ಸಂಚಾಲಕ. (ನೋಡಲ್ ಪ್ರೇರಕ/ ಪ್ರೇರಕಿ
2. ಸಹ ಪ್ರೇರಕ (ಸಹ ಸಂಚಾಲಕ)
3. ಗ್ರಾಮಶಿಕ್ಷಣ ಸಮಿತಿ ಅಧ್ಯಕ್ಷರು/ಸದಸ್ಯರು
4. ಆಸಕ್ತ ಶಾಲಾ ಶಿಕ್ಷಕರು
5. ಊರಿನ ಯುವಕ/ಯುವತಿ ಮಂಡಲದ ಆಯ್ದ ಪ್ರತಿನಿಧಿಗಳು
6. ಊರಿನ ಇತರ ಆಸಕ್ತರು

## ಮಳೆನೀರು ಬಳಕೆ ಸಂಘದ ಚಟುವಟಿಕೆಗಳು ಹಾಗೂ ಕಾರ್ಯದರ್ಶಿಯ ಜವಾಬ್ದಾರಿಗಳು

'ಮಳೆ ನೀರು ಬಳಕೆ ಸಂಘ'ವು ಬಹಮುಖ್ಯವಾಗಿ ಕೆಳಕಂಡ ಚಟುವಟಿಕೆಗಳನ್ನು ತನ್ನ ವ್ಯಾಪ್ತಿಯಲ್ಲಿ ನಡೆಸಬೇಕೆಂಬ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ.

1. ಛಾವಣಿ ಮಳೆನೀರು ಸಂಗ್ರಹ ಮತ್ತು ಬಳಕೆಯ ಕಾರ್ಯ ಚಟುವಟಿಕೆ ನಡೆಸುವುದು.
2. ಮಳೆನೀರು ಬಳಕೆ ಸಂಘದ ಕಾರ್ಯದರ್ಶಿ, ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರ ನೋಡಲ್ ಪ್ರೇರಕನಾಗಿರುತ್ತಾನೆ.
3. ಸಂಘದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಸಹ ಪ್ರೇರಕ ಹಾಗೂ ಆತನ ವ್ಯಾಪ್ತಿಯಲ್ಲಿರುವ ಇತರ ನಿರಂತರ ಶಿಕ್ಷಣ ಕೇಂದ್ರಗಳ ಸಹಕಾರದೊಂದಿಗೆ ನಿರ್ವಹಿಸುತ್ತಾನೆ.
4. ಊರಿನ ಹಾಗೂ ಸಂಘದ ಎಲ್ಲಾ ಸದಸ್ಯರು, ಸಾರ್ವಜನಿಕರ ಸಹಾಯ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುತ್ತಾನೆ.
5. ಮಳೆ ನೀರು ಬಳಕೆ ಕುರಿತಂತೆ ಊರಿನ ಯಾವ ವ್ಯಕ್ತಿಯಾಗಲಿ, ಸಾರ್ವಜನಿಕರಾಗಲಿ, ಸಂಘ ಸಂಸ್ಥೆಗಳಾಗಲಿ ಸಹಾಯ ಹಸ್ತ ಕೋರಿದಾಗ ಪ್ರಾಮಾಣಿಕವಾಗಿ ಮಳೆನೀರು ಸಂಗ್ರಹ ಮತ್ತು ಬಳಕೆ ಕುರಿತಂತೆ ಸಂಘದ ಮೂಲಕ ಎಲ್ಲ ಸಲಹೆ ಸಹಕಾರ ನೀಡುತ್ತಾನೆ.
6. ನಿರಂತರ ಶಿಕ್ಷಣ ಕೇಂದ್ರದ ವ್ಯಾಪ್ತಿಯಲ್ಲಿ ಪ್ರಾರಂಭವಾಗುವ ಮಳೆನೀರು ಸಂಘದ ಕಾರ್ಯದರ್ಶಿಯಾದ ನೋಡಲ್ ಪ್ರೇರಕ/ ಪ್ರೇರಕಿಯರಿಬ್ಬರೂ ಸಂಘದ ಮೂಲಕ ಕೈಗೆತ್ತಿಕೊಳ್ಳುವ ಕಾರ್ಯಚಟುವಟಿಕೆಗಳ ಕುರಿತಂತೆ ಆಗಾಗ್ಗೆ ತಾಲ್ಲೂಕು ಸಾಕ್ಷರತಾ ಸಮಿತಿ ಹಾಗೂ

ಜಿಲ್ಲಾ ಸಾಕ್ಷರತಾ ಸಮಿತಿಯ ಕಾರ್ಯದರ್ಶಿಗಳಿಗೆ ಒಂದು ವರದಿಯನ್ನು ಮಾಹಿತಿ ರೂಪದಲ್ಲಿ ನೀಡುವುದು ಒಳ್ಳೆಯದು.

7. ನಾಡಿನ ಇತರೆಡೆ ಮಳೆನೀರು ಸಂಗ್ರಹ ಹಾಗೂ ಬಳಕೆ ಕುರಿತಂತೆ ಆಗಿರುವ ಬೆಳವಣಿಗೆ ಹಾಗೂ ಕ್ಷೇತ್ರದಲ್ಲಿ ಆಗಿರುವ ಹೊಸ ಹೊಸ ತಂತ್ರಜ್ಞಾನಗಳ ಮಾಹಿತಿ ಸಂಗ್ರಹಿಸಬೇಕು. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಸಂಘದ ಸದಸ್ಯರೊಡನೆ ಹಂಚಿಕೊಂಡು ಕಾರ್ಯಪ್ರವೃತ್ತರಾಗಬೇಕು.

8. ಮಳೆನೀರು ಸಂಗ್ರಹ ಹಾಗೂ ಬಳಕೆ ಕುರಿತಂತೆ ಲಭ್ಯವಾಗುವ ಮಾಹಿತಿ ಯನ್ನು ಆಕರ್ಷಕವಾಗಿ ದೊಡ್ಡ ಹಾಳೆಯಲ್ಲಿ ಬರೆದು ಚಾರ್ಟಿನ ರೂಪದಲ್ಲಿ ನಿರಂತರ ಶಿಕ್ಷಣ ಕೇಂದ್ರ ಹಾಗೂ ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ ಹಾಕಲು ಪ್ರಯತ್ನಿಸಬೇಕು. ಇದರಿಂದ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಚಾರ ಸಿಗುತ್ತದೆ. ಜನರಿಗೆ ಮಾಹಿತಿ ಲಭ್ಯವಾಗುತ್ತದೆ.

9. ಸಂಘದವತಿಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳ ಸಚಿತ್ರವಿವರವನ್ನು ಸಂಘದ ಕಛೇರಿಯಲ್ಲಿ/ನಿರಂತರ ಶಿಕ್ಷಣ ಕೇಂದ್ರದಲ್ಲಿ ದಾಖಲಾತಿಯಾಗಿ ಕಾಯ್ದಿರಿಸಬೇಕು.

10. ಸಂಘದ ಕಾರ್ಯ ಚಟುವಟಿಕೆಗಳನ್ನು ಸ್ಥಳೀಯ ದಿನಪತ್ರಿಕೆ ಹಾಗೂ ಮತ್ತಿತರ ಮಾಧ್ಯಮಗಳ ಮೂಲಕ ಪ್ರಚಾರವಾಗುವಂತೆ ನೋಡಿಕೊಳ್ಳಬೇಕು.

11. ಸಂಘದ ಆಶ್ರಯದಲ್ಲಿ ಆಗಾಗ್ಗೆ ಮಳೆನೀರ ತಜ್ಞರು ಲಭ್ಯವಿದ್ದಲ್ಲಿ ಅವರನ್ನು ಆಹ್ವಾನಿಸಿ ಗ್ರಾಮದ ಇತರರಿಗೆ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರಯತ್ನಿಸ ಬೇಕು.

12. ಸ್ಥಳೀಯದಿನ ಪತ್ರಿಕೆ, ರಾಜ್ಯ ಮಟ್ಟದ ಪತ್ರಿಕೆ, ವಾರಪತ್ರಿಕೆ ಇತ್ಯಾದಿಗಳಲ್ಲಿರುವ ಮಳೆ ನೀರು ಕುರಿತ ಲೇಖನ, ಚಿತ್ರ ಇತ್ಯಾದಿಗಳನ್ನು ಚಾರ್ಟು ರೂಪದಲ್ಲಿ ಸಿದ್ಧಪಡಿಸಿ ಕೇಂದ್ರದಲ್ಲಿ ಪ್ರದರ್ಶಿಸಿ ಹಾಗೂ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರಯತ್ನಿಸಿ.

## ಉಪಸಂಹಾರ

**ಮೇಲಿನ ವಿವರಗಳು ಕೇವಲ ಮಾದರಿ ಚಿತ್ರಣಗಳು. ಮುಂದುವರಿಕೆ ಶಿಕ್ಷಣ ಕೇಂದ್ರಗಳು ನಮ್ಮ ಕಾರ್ಯವ್ಯಾಪ್ತಿಗೆ ನೇರವಾಗಿ ಸಂಬಂಧಿಸಿದ್ದರಿಂದ ಅದನ್ನೇ ಮಾದರಿಯಾಗಿಟ್ಟುಕೊಂಡು ನಿರೂಪಿಸಲಾಗಿದೆ. ಈ ಚಟುವಟಿಕೆಗಳು ಮುಂದುವರಿಕೆ ಶಿಕ್ಷಣದಷ್ಟೆ ಸಮುದಾಯ ಆಧಾರಿತ ಚಟುವಟಿಕೆಯಾಗಿ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಸಂಘಗಳ, ಸ್ತ್ರೀಶಕ್ತಿ ಸಂಘಟನೆಗಳು ಇತ್ಯಾದಿ ಹತ್ತೂ ಹಲವು ಬಗೆಯ ಜನಪದ ಸಂಸ್ಥೆಗಳು ನಿರ್ವಹಿಸಬಹುದಾಗಿದೆ. ಒಟ್ಟಾರೆ ಸ್ವಾಭಾವಿಕ ಸಂಪನ್ಮೂಲಗಳಲ್ಲಿ ಒಂದಾದ ಭಾವಣೆ ಮಳೆನೀರು ಸಂಗ್ರಾಹದ ತುರ್ತನ್ನು ನಾವು ಅರ್ಥಮಾಡಿಕೊಂಡು ನಮ್ಮ ನೆರೆಹೊರೆಗೂ ಅರಿವು ಮೂಡಿಸಿ, ಜೀವ ಜಗತ್ತನ್ನು ಪೋಷಿಸುವ ಸಂರಕ್ಷಿಸುವ ಆ ಮೂಲಕ ಹೊಸ ಜನಾಂಗಕ್ಕೆ ಭರವಸೆಯನ್ನು ತುಂಬುವ ಕರ್ತವ್ಯದಲ್ಲಿ ನಾವೆಲ್ಲ ಪಾಲ್ಗೊಳ್ಳಬೇಕಿದೆ. ಇದೇ ಈ ಲೇಖನದ ಅಂತರ್ಗತ ಆಶಯ.**

***



# ಜಲಸಾಕ್ಷರತೆ

## ನೀರು ಸಂರಕ್ಷಣಾ ವಿಧಾನಗಳ ಚಿಂತನೆಗಳು

"ಎಲ್ಲಿ ನೀರು ಓಡುತ್ತದೆಯೋ ಅಲ್ಲಿ ಅದನ್ನು ನಡೆಯುವಂತೆ ಮಾಡಿರಿ.
ಎಲ್ಲಿ ನೀರು ನಡೆಯುತ್ತದೆಯೋ ಅಲ್ಲಿ ಅದನ್ನು ತೆವಳುವಂತೆ ಮಾಡಿರಿ.
ಎಲ್ಲಿ ನೀರು ತೆವಳುತ್ತದೆಯೋ ಅಲ್ಲಿ ಅದನ್ನು ನಿಲ್ಲುವಂತೆ ಮಾಡಿರಿ."

- ಫಾದರ್ ಕ್ರಿಸ್ಟಿನೊ ಲೋಬೋ

"ಭೂಮಿ ನಮ್ಮೆಲ್ಲರ ಅಗತ್ಯಗಳನ್ನು ಪೂರೈಸುವಷ್ಟು ಸಮೃದ್ಧವಾಗಿದೆ.
ಆದರೆ ನಮ್ಮ ದುರಾಸೆಗಳನ್ನು ಈಡೇರಿಸುವ ಸಾಮರ್ಥ್ಯವನ್ನು ಅದು ಹೊಂದಿಲ್ಲ. ಕ್ಷಿಪ್ರಲಾಭಗಳಿಸಲು ಭೂಮಿಯ ಸಾರವನ್ನೇ ಹೀರುವುದು ಕೊನೆಗೆ ವಿನಾಶಕಾರಿಯಾದ ಸಂಕುಚಿತ ಧೋರಣೆಯಾಗಿದೆ. ಇದರಿಂದ ಭೂಮಿಯ ಜೀವಧಾರಣ ಶಕ್ತಿಯೇ ಕುಂದಿಹೋಗುತ್ತದೆ. ನಾನೇನೂ ವೈಜ್ಞಾನಿಕ ಪ್ರಗತಿಯ ವಿರೋಧಿಯಲ್ಲ. ಪಾಶ್ಚಾತ್ಯರ ವೈಜ್ಞಾನಿಕ ಪ್ರಗತಿಗೆ ನನ್ನ ಮೆಚ್ಚುಗೆಗೆ ಮಿತಿಯಿದೆ. ಭವಿಷ್ಯದ ಮಾನದಂಡದಲ್ಲಿ ಕೇವಲ ಮನುಷ್ಯ ಕುಲವಷ್ಟೇ ಅಲ್ಲದೆ ಸಮಸ್ತ ಜೀವರಾಶಿಯೂ ಒಳಗೊಳ್ಳುತ್ತದೆ. ಪಾಶ್ಚಾತ್ಯ ವಿಜ್ಞಾನ, ಇಂದಿನ ಜ್ಞಾನಸಾಧನೆಯ ವಿಧಾನಗಳಿಗೆ ಮಿತಿ, ಮೇರೆಗಳನ್ನು ಹಾಕುವ ದಿನ ಉದಯವಾಗುತ್ತಿರುವುದನ್ನು ನಾನು ಸ್ಪಷ್ಟವಾಗಿ ಕಾಣುತ್ತಿದ್ದೇನೆ."

- ಮಹಾತ್ಮ ಗಾಂಧೀ


ಪ್ರಕಟಣೆ

ರಾಜ್ಯ ಸಂಪನ್ಮೂಲ ಕೇಂದ್ರ - **ಕರ್ನಾಟಕ**
ಪೋಸ್ಟ್ ಬಾಕ್ಸ್ ನಂ. 301,
ಹಳೇ ಹೆಚ್.ಡಿ.ಕೋಟೆ ರಸ್ತೆ, ಮೈಸೂರು
email: mysrc@sancharnet.in
ದೂರವಾಣಿ : 2363312, 2363283

SRC-K
CENTRE FOR EXCELLENCE IN LITERACY & DEVELOPMENT

ಮತ್ತು
ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ
ಬೆಂಗಳೂರು.

**JALA SAKSHARATHE (WATER LITERACY) : A book on Water Harvesting, Edited by Sri Raju B. and publilshed by State Resource Centre - Karnataka Mysore - 8 Pp : x+222**

**ಪ್ರಧಾನ ಸಂಪಾದಕರು**

**ಕಿಶೋರ್ ಅತ್ತಾವರ್**

**ಸಂಪಾದಕರು**

**ರಾಜು ಬಿ.**

**ನೆರವು**

**ರವಿಕುಮಾರ್ ಉ.ನಾ. ಕಾರ್ಟ್ ಮೈಸೂರು.**

**ಮುಖಪುಟ/ವಿನ್ಯಾಸ/ಒಳಚಿತ್ರಗಳು**

**ಪ್ರಕಾಶ್‌ಚಿಕ್ಕಪಾಳ್ಯ**

**ಪ್ರಕಟಣಾ ವರ್ಷ**

**2003**

**ಪ್ರತಿಗಳು**

**500**

**ಎರಡನೇ ಮುದ್ರಣ**

**2005**

**ಪ್ರತಿಗಳು**



**© : ರಾಜ್ಯ ಸಂಪನ್ಮೂಲ ಕೇಂದ್ರ - ಕರ್ನಾಟಕ**

**ನಂ. 301, ಹಳೆ ಹೆಚ್.ಡಿ.ಕೋಟೆ ರಸ್ತೆ, ಮೈಸೂರು 8**

**ಅಕ್ಷರ ಜೋಡಣೆ**

**ಮಂಜುಳ ಎಸ್. ಮತ್ತು ಮಮತ ಡಿ.ಸಿ.**

**ವಿಸ್ಮಯ ಗ್ರಾಫಿಕ್ಸ್, ಮೈಸೂರು. ಫೋ : 5554374**

**ಮುದ್ರಕರು**



**ಕೃತಜ್ಞತೆಗಳು :** 'ಜಲಸಾಕ್ಷರತೆ' ಸಾಹಿತ್ಯ ಪ್ರಕಟಣೆಗೆ ಪ್ರೇರಣೆ ನೀಡಿದ ಬಹುಮುಖ್ಯ ಸಾಹಿತ್ಯ ಪರಿಕರಗಳಲ್ಲಿ ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್ ಸಂಸ್ಥೆಯ Dying Wisdom ಮತ್ತು Making Water Everybody's Business ಗಳು ಬಹುಮುಖ್ಯವಾದವು. ಜೊತೆಗೆ ಆ ಸಂಸ್ಥೆಯ ಸಂಸ್ಥಾಪಕ ಸದಸ್ಯರಾದ ದಿವಂಗತ ಶ್ರೀ ಅನಿಲ್‌ಅಗರ್‌ವಾಲ್‌ರವರು ಬಿಟ್ಟು ಹೋದ ಸಾಧನೆಯ ಹೆಗ್ಗುರುತುಗಳೇ ನಮಗೆ ಪ್ರೇರಣೆ ಹಾಗೂ ದಾರಿದೀಪಗಳಾಗಿವೆ. ಈ ಸಂಸ್ಥೆ ಪ್ರಕಟಿಸಿದ ಸಾಹಿತ್ಯಗಳ ವಸ್ತು ವಿಷಯ ಹಾಗು ಛಾಯಾ-ಚಿತ್ರ ಮತ್ತು ಚಿತ್ರಗಳನ್ನು ಜಲಸಾಕ್ಷರತೆಯ ಸಾಹಿತ್ಯಕ್ಕೆ ಹೇರಳವಾಗಿ ಬಳಸಿಕೊಂಡು ತನ್ಮೂಲಕ ಜಲಸಾಕ್ಷರತೆ ಪ್ರಕಟಣೆಯನ್ನು ಅರ್ಥಪೂರ್ಣವಾಗಿ ಮಾಡಲಾಗಿದೆ. ಹಾಗೆಯೇ ಅಗತ್ಯವಿದ್ದ ಛಾಯಚಿತ್ರ, ರೇಖಾಚಿತ್ರಗಳನ್ನು ಪ್ರಜಾವಾಣಿ ದಿನಪತ್ರಿಕೆ, ಮತ್ತುಹಲವಾರು ಪರಿಣಿತರು ಹಾಗೂ ವಿವಿಧ ಮೂಲಗಳಿಂದಲೂ ಬಳಸಿಕೊಳ್ಳಲಾಗಿದೆ. ಈ ಎಲ್ಲಾ ಸಂಘ, ಸಂಸ್ಥೆ, ವ್ಯಕ್ತಿಗಳಿಗೆ ರಾಜ್ಯ ಸಂಪನ್ಮೂಲ ಕೇಂದ್ರವು ಆಭಾರಿಯಾಗಿರುತ್ತದೆ. ।ಸಂ



ಓದುಗರೊಂದಿಗೆ

ಸಾಕ್ಷರತೆಯ ಜೊತೆ ಜೊತೆಗೆ ಅಭಿವೃದ್ಧಿ ಪರವಾದ ಚಿಂತನೆಗಳು ಹಾಗು ಕಾರ್ಯಕ್ರಮಗಳನ್ನು ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದಲ್ಲಿ ಅಳವಡಿಸುವುದರ ಮೂಲಕ ಜನರ ಜೀವನ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವು ಪುಟ್ಟ ಪ್ರಯತ್ನ ಮಾಡುತ್ತಿದೆ. ಮಾನವ ಸಂಪನ್ಮೂಲದ ಅಭಿವೃದ್ಧಿ ಹಾಗೂ ಅದರ ಅಗತ್ಯಗಳನ್ನು ಪೂರೈಸಲು ಹಲವು ನಿಟ್ಟಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಇತ್ತೀಚಿಗೆ ರಾಜ್ಯ ಸಂಪನ್ಮೂಲ ಕೇಂದ್ರವು ಗ್ರಹಿಸಿಕೊಂಡ ವಿಚಾರಗಳಲ್ಲಿ ಜಲಸಂರಕ್ಷಣಾ ವಿಚಾರವು ಮುಖ್ಯವಾದುದು. ಇಂದು ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಂದು ಸಂಘ-ಸಂಸ್ಥೆಗಳು ನೀರು ಮತ್ತು ನೀರಿನ ಸಂರಕ್ಷಣೆ, ಛಾವಣಿ ಮಳೆ ನೀರು ಸದ್ಬಳಕೆ ಕುರಿತಂತೆ ಕ್ರಿಯೆಗೆ ತೊಡಗಬೇಕಾದುದು ಅನಿವಾರ್ಯವೆನಿಸಿದೆ. ನೀರು ಪ್ರತಿಯೊಬ್ಬನ ಹೊಣೆಗಾರಿಕೆ ಆಗಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವು ಹನಿ ಹನಿಗೂಡಿದ್ರೆ ಹಳ್ಳ ಎಂಬ ತತ್ವದ ದಾರಿ ಹಿಡಿದು ಜಲಪರವಾದ ಕಾರ್ಯನಿರ್ವಹಿಸುತ್ತಿರುವ ಹತ್ತಾರು ಮನಸ್ಸುಗಳೊಡನೆ ಸೇರಿಕೊಂಡು ತಾನೂ ಸಹ ಒಂದಷ್ಟು ಅರ್ಥಪೂರ್ಣ ಕೆಲಸ ನಿರ್ವಹಿಸಲು ತೊಡಗಿದೆ.

ಸಾಕ್ಷರತಾ ಕಾರ್ಯಕರ್ತರು, ಆಸಕ್ತರು ಹಾಗೂ ಮುಂದುವರಿಕೆ ಶಿಕ್ಷಣದ ಕೇಂದ್ರ ಬಿಂದುವಾದ ಪ್ರೇರಕರುಗಳು ಜೀವಜಲದ ಸಂರಕ್ಷಣೆಯಂತ ಕಾರ್ಯಗಳಲ್ಲಿ ತೊಡಗುವುದರ ಮೂಲಕ ಮತ್ತು ಜೀವಜಲದ ಸುಸ್ಥಿರ ಬಳಕೆಯಂತಹ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಸಾಕ್ಷರತಾ ಕಾರ್ಯಚಟುವಟಿಕೆಗಳಿಗೆ ಜನಮನ್ನಣೆ ಗಳಿಸುವ ನಿಟ್ಟಿನಲ್ಲಿ ಕಾರ್ಯಚಟುವಟಿಕೆ ನಡೆಸಬೇಕಾಗಿದೆ. ಈ ದಿಸೆಯಲ್ಲಿ ರಾಜ್ಯದಾದ್ಯಂತ ಪ್ರತಿ ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿರುವ ನಿರಂತರ ಶಿಕ್ಷಣ ಕೇಂದ್ರಗಳು ಸಾಕ್ಷರತೆಯ ಜೊತೆಗೆ ಜಲಸಾಕ್ಷರತೆಯ ಕಂಪನ್ನು ಬೀರುವ ಕೇಂದ್ರಗಳಾಗಬೇಕು. ಪ್ರೇರಕ ಜಲಸಾಕ್ಷರತೆಯ ಕಾರ್ಯಚಟುವಟಿಕೆಯನ್ನು ಜನತೆಯ ಜೊತೆಗೂಡಿ ಮಾಡುವುದರ ಮೂಲಕ ಜಲಯೋಧನಾಗಿ ಪ್ರತಿಯೊಂದು ಹಳ್ಳಿಯು ಜಲಸುಸ್ಥಿರ ಗ್ರಾಮಗಳಾಗಬೇಕು ಎಂಬ ಆಶಯಕ್ಕೆ ಜೀವತುಂಬಬೇಕಿದೆ.

ಇದುವರೆವಿಗೂ ರಾಜ್ಯ ಸಂಪನ್ಮೂಲ ಕೇಂದ್ರ ಇಂಥ ಆಲೋಚನೆಯಲ್ಲಿ ಜಲಸಾಕ್ಷರತೆ ಕುರಿತ ಪತ್ರಿಕೆ, ಕೆಲವು ತರಬೇತಿ ಶಿಬಿರ ಮತ್ತು ಹಲವಾರು ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಾ, ಜಲಸಂಗತಿಗಳ ಬಗ್ಗೆ ಆಸಕ್ತರಿಗೆ ಮಾಹಿತಿ ಒದಗಿಸುತ್ತಾ ಬಂದಿದೆ. ಇದನ್ನು ಮತ್ತಷ್ಟು ವಿಸ್ತರಿಸುವ ಚಿಂತನೆಯಲ್ಲಿ ಮೂಡಿದ್ದು ಈ 'ಜಲಸಾಕ್ಷರತೆ' ಗ್ರಂಥ. ಇದನ್ನು ನಾಡಿನ ಜಲಪರವಾದ ಚಿಂತಕರು,

## ಓದುಗರೊಂದಿಗೆ

ಪರಿಣತರುಗಳಾದ ಹಾಗೂ ನನ್ನ ಆತ್ಮೀಯ ಮಿತ್ರರಾದ ಶ್ರೀ ಪಡ್ರೆ ಮತ್ತು ಉ.ನಾ. ರವಿಕುಮಾರ್ ತುಂಬಾ ಆಸಕ್ತಿ ವಹಿಸಿ ಈ ಸಾಹಿತ್ಯ ಪ್ರಕಟಣೆಯಲ್ಲಿ ಸಹಾಯ ಹಸ್ತ ನೀಡಿರುವುದು ತುಂಬಾ ಸಂತೋಷಕರವಾದ ವಿಷಯ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಇದಲ್ಲದೆ ಈ ಸಾಹಿತ್ಯಕ್ಕೆ ತಮ್ಮ ಅಮೂಲ್ಯವಾದ ಲೇಖನಗಳನ್ನು ನೀಡಿ ತಮ್ಮ ಅನುಭವವನ್ನು ಹಂಚಿಕೆ ಮಾಡಿಕೊಂಡಿರುವ ಜಲಪರಿಣಿತರಾದ ಶ್ರೀ ಕೆ. ನಾರಾಯಣ ಸ್ವಾಮಿ, ಕೆ.ಸಿ. ಮಂಜುನಾಥ್, ಟಿ.ಎಂ. ಮಂಜುನಾಥ್, ವಿ. ಜಗನ್ನಾಥ್, ಕ್ಷೀರಸಾಗರ್, ಪ್ರೊ|| ಎಲ್. ಪ್ರಸನ್ನಕುಮಾರ್, ಪ್ರೊ|| ಶೇಖರ್ ಗೌಳೇರ್ ಇವರುಗಳ ನೆರವನ್ನು ನಾನು ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತೇನೆ. ಅಲ್ಲದೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಖ್ಯಾತಿಯ ಹಲವಾರು ಜಲತಜ್ಞರು, ಸಂಸ್ಥೆಗಳ ಸಾಹಿತ್ಯದ ಜ್ಞಾನದ ನೆರವನ್ನು ಈ ಗ್ರಂಥ ರಚನೆಯಲ್ಲಿ ಬಳಕೆ ಮಾಡಿಕೊಂಡಿದ್ದೇವೆ. ಅದಕ್ಕಾಗಿ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ನನ್ನ ಕರ್ತವ್ಯ.

ಎಲ್ಲಕ್ಕಿಂತ ಹೆಚ್ಚಾಗಿ ಪರಿಸರ ಸಂರಕ್ಷಣೆ ಮತ್ತು ಜಲಸುಸ್ಥಿರತೆಗಾಗಿ ಜೀವಮಾನವಿಡಿ ದುಡಿದ ದಿವಂಗತ ಶ್ರೀ ಅನಿಲ್ ಅಗರ್‌ವಾಲ್‌ರವರಿಗೆ ಈ ಕೃತಿಯನ್ನು ಅರ್ಪಿಸುವುದು ರಾಜ್ಯ ಸಂಪನ್ಮೂಲ ಕೇಂದ್ರದ ಆದ್ಯ ಕರ್ತವ್ಯವೆಂದೂ ತಿಳಿಯುತ್ತೇನೆ.

ಈ ಎಲ್ಲಾ ಕಾರ್ಯಕ್ಕೆ ನೆರವು, ಸಲಹೆ, ಮಾರ್ಗದರ್ಶನ ಮಾಡುತ್ತಾ 'ಜಲಸಾಕ್ಷರತೆ'ಯ ಇಂದಿನ ಅಗತ್ಯವನ್ನು ತೀವ್ರವಾಗಿ ಪರಿಗಣಿಸಿ, ಅದರ ಪ್ರಚಾರಕ್ಕೆ ಆದ್ಯತೆ ನೀಡಬೇಕೆಂದು ಹತ್ತು ಹಲವಾರು ಸೂಚನೆ ನೀಡಿ ಪ್ರೋತ್ಸಾಹಿಸುತ್ತಾ ಬಂದಿರುವವರು, ನಮ್ಮ ಅಧ್ಯಕ್ಷರಾದ ಡಾ|| ಎನ್. ನಾಗಾಂಬಿಕದೇವಿ ಭಾ.ಆ.ಸೇ. ಅವರು. ಇವರ ಸಲಹೆ ಮಾರ್ಗದರ್ಶನದಿಂದಲೇ ಈ ಕೃತಿ ಮರು ಮುದ್ರಣ ಕಾಣುವಂತಾಗಿದೆ. ಇದು ಸಾಧ್ಯವಾಗಿದ್ದಕ್ಕೆ ಅವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುವೆ. ಜೊತೆಗೆ ಈ ಕಾರ್ಯದ ಆರಂಭಕ್ಕೆ ಒತ್ತು ನೀಡಿ ಸಹಕರಿಸಿದ್ದ ಹಿಂದಿನ ಅಧ್ಯಕ್ಷರಾದ ಡಾ|| ಹೆಚ್.ಸುದರ್ಶನ್‌ರವರಿಗೆ ನನ್ನ ವಿಶೇಷ ನೆನಕೆಗಳು. ಎಂದಿನಂತೆ ಜಲಸಾಕ್ಷರತೆ ಬಗ್ಗೆ ತನ್ನ ಕಾಳಜಿ ಮತ್ತು ವಾತ್ಸಲ್ಯವನ್ನು ತೋರುತ್ತಾ, ಇತರರಿಗೂ ಜಲಸಂರಕ್ಷಣೆ ಬಗ್ಗೆ, ಉತ್ಸಾಹ ಬರುವಂತೆ ಶ್ರದ್ಧೆಯಿಂದ ದುಡಿಯುತ್ತಿರುವ ಈ ಹೊತ್ತಿಗೆಯ ಸಂಪಾದಕ ಮತ್ತು ಸಹೋದ್ಯೋಗಿ ರಾಜು ಬಿ. ಇವರನ್ನು ಅಭಿನಂದಿಸುತ್ತೇನೆ. ಇದನ್ನು ಓದುಗರು, ಕ್ಷೇತ್ರ ಕಾರ್ಯಕರ್ತರು ಬಳಕೆ ಮಾಡಿಕೊಂಡಲ್ಲಿ ನಮ್ಮ ಶ್ರಮ ಸಾರ್ಥಕವೆಂದು ತಿಳಿಯುತ್ತೇವೆ.

ದಿನಾಂಕ : ಮಾರ್ಚ್ - 05

ಕಿಶೋರ್ ಅತ್ತಾವರ್
ನಿರ್ದೇಶಕರು

# ಸಂಪಾದಕರ ಮಾತು....

ಮನುಷ್ಯನನ್ನು ಇನ್ನಿತರ ಪ್ರಾಣಿ ಸಂಕುಲಕ್ಕಿಂತ ಭಿನ್ನವೆಂದು ಪ್ರತ್ಯೇಕಿಸಿ ನೋಡಲು ನಮಗಿರುವ ಏಕೈಕ ಕಾರಣೀಭೂತ ಅಂಶವೆಂದರೆ ಮನುಷ್ಯನಿಗಿರುವ ಆಲೋಚನಾಶಕ್ತಿ ಮಾತ್ರ. ಈ ವಿಶಿಷ್ಟ ಶಕ್ತಿ ಮಾತ್ರದಿಂದಲೇ ಇಂದಿನ ನಾಗರೀಕತೆಯ ಉದಯ ಮತ್ತು ಬೆಳವಣಿಗೆಗಳು ಆಗಿವೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಹಂತ ಹಂತವಾಗಿ ಈತನ ಬೌದ್ಧಿಕ ಶಕ್ತಿ ವಿಕಾಸವಾಗುತ್ತಾ ಬಂದಂತೆ ಆಕಾಶವೇ ನನ್ನ ಮಿತಿ **'Sky is my limit'** ಎಂದ!. ಇಂದು ಈ ಜ್ಞಾನದ ಅಹಂ ಮನುಷ್ಯನ ನೆತ್ತಿಗೇರಿ ಆತನ ಎಲ್ಲಾ ಆಲೋಚನೆಗಳು ಪ್ರಕೃತಿಯ ಸಹ ಬಾಳ್ವೆಯಿಂದ ಬಹುದೂರ ಸಾಗಿ ಬಿಡುತ್ತಿವೆ. ಆತನ ಆಲೋಚನಾ ಶಕ್ತಿ ಗೊತ್ತುಗುರಿಯಿಲ್ಲದ ದಾರಿಯಲ್ಲಿ ಸಾಗಬಾರದು, ಅಂದರೆ ಲಂಗುಲಗಾಮಿಲ್ಲದ ಕುದುರೆಯಂತೆ ಸಾಗಬಾರದು ಅಥವಾ ಆತನ ಆಲೋಚನಾ ಶಕ್ತಿ ವಿಧ್ವಂಸಕ ಕೃತ್ಯಗಳಿಗೆ ಪ್ರೋತ್ಸಾಹ ನೀಡುವ ಅಥವಾ ಅಂತಹುಗಳ ಸೃಷ್ಟಿಗೆ ಆಹ್ವಾನ ನೀಡುವಂತಹ ಕ್ರಿಯೆಗಳಿಂದ ದೂರವಿರಿಸುವ ಪ್ರಯತ್ನ ಮಾಡಬೇಕಿದೆ. ಇದೇ ಇಂದು ನಮ್ಮ ಮುಂದಿರುವ ಸವಾಲು.

ಅಕ್ಷರವಿದ್ಯೆಯಿಂದ ಬೌದ್ಧಿಕ ಬೆಳವಣಿಗೆಯಾಗುವಂತೆ, ಅಕ್ಷರ ವಿದ್ಯೆಯಿಂದ ಹೃದಯವಂತಿಕೆ ರೂಪುಗೊಳ್ಳುವಂತೆ, ಪರಿಸರ ಪ್ರಜ್ಞೆಯಿಂದ ಇಡೀ ವಿಶ್ವದ ಸುಸ್ಥಿರತೆ ಹೆಚ್ಚಾಗುತ್ತದೆ. ಹಾಗೆಯೇ ಜಲಸಾಕ್ಷರತೆಯನ್ನು ಅಥವಾ ಜಲಪ್ರಜ್ಞೆಯನ್ನು ಹೊಂದುವುದರಿಂದ ಭೂಮಿಯ ಮೇಲಿನ ಪ್ರತಿಯೊಂದು ಜೀವ ಸಂಕುಲವು ನೆಮ್ಮದಿಯ ನಿಟ್ಟುಸಿರು ಬಿಡಲು ಸಾಧ್ಯವಾಗುತ್ತದೆ. ಇಲ್ಲಿ ಪ್ರಕೃತಿ ಎಂದಾಕ್ಷಣ ಅದು ಮರಗಿಡ, ಪ್ರಾಣಿ ಮತ್ತು ನದಿ, ಆಕಾಶ ಎಂದು ಹೇಳಿದರೆ ಸಾಕಾಗದು. ಒಂದು ದೇಹದ ಪ್ರಕೃತಿ, ಒಂದು ಕುಟುಂಬದ ಪ್ರಕೃತಿ -ಒಂದು ಹಳ್ಳಿಯ ಪ್ರಕೃತಿ, ಹಾಗೆಯೇ ಒಂದು ಪ್ರದೇಶದ ಪ್ರಕೃತಿಯನ್ನು ನಾವು ಇಡಿಯಾಗಿ, ಸಮಷ್ಟಿಯಾಗಿ, ನೋಡುವುದನ್ನೂ ಕಲಿಯಬೇಕಿದೆ. ಪ್ರಕೃತಿಯ ಒಂದು ಭಾಗವಾಗಿ ಜನಿಸಿರುವ ನಮಗೆ ಪ್ರಕೃತಿಯ ಅನನ್ಯತೆ ಮತ್ತು ಆನಂದ ಅರ್ಥವಾಗುವುದು ಆಗಲೇ.

ಹಿಂದೆ ನಮ್ಮ ಆಲೋಚನೆಗಳ ದಿಕ್ಕೇ ಬೇರೆ ತೆರನಾಗಿತ್ತು. ನಮ್ಮ ಊರು, ನಮ್ಮ ನಾಡು, ನಾವುಗಳೆಂಬ ಸಮಷ್ಟಿ ಪ್ರಜ್ಞೆಗೆ ಹೆಚ್ಚಿನ ಒತ್ತಾಸೆ ಇತ್ತು. ಆದರಿಂದು ನಾನು, ನನ್ನದು ಎಂಬ ವೈಯಕ್ತಿಕ ಹಿತಾಶಕ್ತಿಗಳೇ ವಿಜೃಂಭಿಸುತ್ತಿವೆ. ಮೈದುಂಬಿ ಕೊಂಡು ಬಿಡುತ್ತಿವೆ. ಹೀಗಾಗಿ ಮನುಷ್ಯನ ಪ್ರಕೃತಿ ಸಹಜವಾದ ಚಿಂತನೆಗಳು ಮತ್ತು ಆಲೋಚನಾ ಶಕ್ತಿಗೆ ಗ್ರಹಣವಿಡಿದು ವಿಕೃತಿಯಾಗುತ್ತಿದೆ. ಹೀಗೆ ಪ್ರಕೃತಿ ವಿಕೃತಿಯಾಗುವುದರ ಮೂಲಕ ಮನುಕುಲದ ಅಳಿವಿಗೆ ನಾಂದಿಯಾಗುವ ಭಯ, ಆತಂಕ ಎಲ್ಲೆಡೆ ಆಕ್ರಮಿಸುತ್ತಿದೆ.

ಹೀಗಾಗಿ ಇಂದು ಜಲಕ್ಷಾಮ ಮನೆಯ, ಹಳ್ಳಿಯ ಮತ್ತು ರಾಜ್ಯದ ಸಮಸ್ಯೆಯಾಗಿ

ಮಾತ್ರ ಉಳಿದಿಲ್ಲ ಇದು ಅಂತರರಾಷ್ಟ್ರೀಯ ಸಮಸ್ಯೆಯಾಗಿದೆ. ಇಡೀ ಭೂಮಂಡಲದ ಸಮಸ್ಯೆಯಾಗಿದೆ. ಹೀಗೆಂದೇ ಮಹಾತ್ಮ ಗಾಂಧೀಜಿಯವರು "ಭೂಮಿ ನಮ್ಮೆಲ್ಲರ ಅಗತ್ಯಗಳನ್ನು ಪೂರೈಸುವಷ್ಟು ಸಮೃದ್ಧವಾಗಿದೆ. ಆದರೆ ನಮ್ಮ ದುರಾಸೆಗಳನ್ನು ಈಡೇರಿಸುವ ಸಾಮರ್ಥ್ಯವನ್ನು ಅದು ಹೊಂದಿಲ್ಲ. ಕ್ಷಿಪ್ರಲಾಭಗಳಿಸಲು ಭೂಮಿಯ ಸಾರವನ್ನೇ ಹೀರುವುದು ಕೊನೆಗೆ ವಿನಾಶಕಾರಿಯಾದ ಸಂಕುಚಿತ ಧೋರಣೆಯಾಗಿದೆ. ಇದರಿಂದ ಭೂಮಿಯ ಜೀವಧಾರಣ ಶಕ್ತಿಯೇ ಕುಂದಿಹೋಗುತ್ತದೆ. ನಾನೇನೂ ವೈಜ್ಞಾನಿಕ ಪ್ರಗತಿಯ ವಿರೋಧಿಯಲ್ಲ. ಪಾಶ್ಚಾತ್ಯರ ವೈಜ್ಞಾನಿಕ ಪ್ರಗತಿಗೆ ನನ್ನ ಮೆಚ್ಚುಗೆಗೆ ಮಿತಿಯಿದೆ. ಭವಿಷ್ಯದ ಮಾನದಂಡದಲ್ಲಿ ಕೇವಲ ಮನುಷ್ಯ ಕುಲವಷ್ಟೇ ಅಲ್ಲದೆ ಸಮಸ್ತ ಜೀವರಾಶಿಯೂ ಒಳಗೊಳ್ಳುತ್ತದೆ. ಪಾಶ್ಚಾತ್ಯ ವಿಜ್ಞಾನ, ಇಂದಿನ ಜ್ಞಾನಸಾಧನೆಯ ವಿಧಾನಗಳಿಗೆ ಮಿತಿ, ಮೇರೆಗಳನ್ನು ಹಾಕುವ ದಿನ ಉದಯವಾಗುತ್ತಿರುವುದನ್ನು ನಾನು ಸ್ಪಷ್ಟವಾಗಿ ಕಾಣುತ್ತಿದ್ದೇನೆ." ಎಂದು ಚಿಂತಿಸಿದರು. ಹೀಗಾಗಿ ನಮ್ಮ ವೈಜ್ಞಾನಿಕ ಚಿಂತನೆಗಳ ತಳಹದಿ ಸುಭದ್ರವಾದ ನೆಲೆಗಟ್ಟಿನ ಮೇಲೆ ನಿಲ್ಲಬೇಕಿದೆ.

ಅಭಿವೃದ್ಧಿಯ ಹೆಸರಿನಲ್ಲಿ ವಿವೇಚನೆಯಿಲ್ಲದೆ ಕೈಗೊಳ್ಳುತ್ತಿರುವ ನಮ್ಮ ಯೋಜನೆಗಳು, ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಮಾಣಗಳು ಜೀವನದ ಸಮತೋಲನವನ್ನೆ ಅಲುಗಾಡಿಸುತ್ತಿವೆ. ಇದರ ಪರಿಣಾಮ ನಮ್ಮ ಸುತ್ತಲಿನ ಪರಿಸರದ ಮೇಲಾಗುತ್ತಿದೆ. ನಮ್ಮ ಜೀವನ ಕ್ರಮ ಬದಲಾಗುತ್ತಿದೆ. ನಮ್ಮ ಕೊರತೆಗಳ ಸಾಲು ಹೆಚ್ಚುತ್ತಿದೆ. ಎಲ್ಲವನ್ನು 'ಲಾಭ'ದ ದೃಷ್ಟಿಯಲ್ಲಿ ನೋಡುವ ಅಥವಾ ಅಳೆಯುವ ಮನೋಧರ್ಮ ಬೆಳೆಯುತ್ತಿದೆ. ಮನುಷ್ಯನ ಈ ಬದಲಾದ ಮನೋಭಾವದಿಂದಾಗಿ ಆತನ ಚಿಂತನಾಶಕ್ತಿ ಸಂಕುಚಿತವಾಗಿ ವಿನಾಶಕಾರಿಯತ್ತ ಸಾಗುತ್ತಿದೆ.

ಆಧುನಿಕ ಜಗತ್ತಿನ ಬೆಳಕಾಗಿದ್ದ ಬುದ್ಧ, ಬಸವಣ್ಣ, ಗಾಂಧೀಜಿ ಇತ್ಯಾದಿಯಾಗಿ ಇಂತಹ ವಿಕೃತಿಗಳಿಂದ ಹೊರಬಂದು ಪ್ರಕೃತಿಯ ಭಾಗವಾಗಿ ಬದುಕಿ ಜೀವದ ಬೆಳಕಾದರು. ಹೀಗೆ ಮನುಷ್ಯರಲ್ಲಿ ಈ ಪ್ರಕೃತಿ ಮತ್ತು ವಿಕೃತಿಗಳ ನಡುವೆ ನಿರಂತರವಾದ ಸಂಘರ್ಷ ನಡೆಯುತ್ತಾ ಬಂದಿದೆ. ಪ್ರಕೃತಿಯನ್ನು ಅರ್ಥೈಸಿಕೊಂಡವನು ಜೀವ ಉಳಿಸುವ ಶಕ್ತಿಯಾಗುತ್ತಾನೆ. ಇಲ್ಲವಾದವನು. ಜೀವ ವಿನಾಶಕ್ಕೆ ಕಾರಣವಾಗುತ್ತಾನೆ.

ಇಂದು ಈ ಭೂಮಿ ಮೇಲಿನ ಜೀವ ಸಂಕುಲಕ್ಕೆ ಮೂಲಾಧಾರವಾದ ಜೀವಜಲಕ್ಕೆ ಸಂಚಕಾರ ಬಂದೊದಗಿದೆ. ಮನುಷ್ಯನಿಗೆ ಉಂಟಾದ ಈ 'ಲಾಭ'ದ ಹಸಿವು ಪಂಚಭೂತಗಳಲ್ಲೊಂದಾದ ನೀರಿನ ಮೇಲೆ ವಿವಿಧ ದಿಕ್ಕುಗಳಿಂದ ಆಕ್ರಮಣ ಮಾಡುತ್ತಿದೆ. ಇದರ ತತ್ಪರಿಣಾಮವೇ ಬರ ಅಥವಾ ಜಲಕ್ಷಾಮ. ಜಲಕ್ಷಾಮ ಪ್ರಕೃತಿಯ ವಿಕೋಪವಲ್ಲ. ಅದು ಪ್ರಕೃತಿಯ ನಿಯಮ ಕೂಡ ಹೌದು. ನಮ್ಮ ದೇಶದ ಚರಿತ್ರೆಯನ್ನು ಗಮನಿಸಿದಾಗ ಹಿಂದೆ ಸುಮಾರು ಬಾರಿ ಜಲಕ್ಷಾಮದ ವಿಕೋಪದಿಂದಾದ ಹಾನಿಗಳ ದಾಖಲೆಗಳೇ ಸಿಗುತ್ತವೆ. ಪ್ರಕೃತಿ ತನ್ನ ಸಮತೋಲನವನ್ನು ಕಾಪಾಡಿಕೊಳ್ಳುವ

ನಿಟ್ಟಿನಲ್ಲಿ ಕಂಡುಕೊಂಡದ್ದು ಬರ. ಹಾಗೆ ನೋಡಿದರೆ ನಮ್ಮ ನೀರಿನ ನಿರ್ವಹಣಾ ವ್ಯವಸ್ಥೆಯ ಜಾಣತನದ ಮೇಲೆಯೇ ನಮ್ಮ ನಾಗರೀಕತೆಗಳು ಬೆಳೆದು ನಿಂತಿದ್ದವು. ಮತ್ತೆ ಈ ಜೀವಜಲಕೊರತೆಯಿಂದಾಗಿ ನಾಗರೀಕತೆ ನಾಶವೊಂದಿರುವುದು ಚರಿತ್ರೆಯ ಇತಿಹಾಸದ ಪುಟಗಳಲ್ಲಿ ಅಡಗಿಕೂತಿದೆ.

ಆದರೆ ಇತಿಹಾಸದಿಂದ ನಾವು ಪಾಠ ಕಲಿಯದೇ ಇರುವುದರಿಂದ ಮತ್ತೊಮ್ಮೆ ನಮ್ಮ ನಾಡು ಜಲಕ್ಷಾಮದತ್ತ ಸಾಗುತ್ತಿದೆ. ಈ ನಿಟ್ಟಿನಲ್ಲಿ ನಾಡಿನ ಪ್ರಜ್ಞಾವಂತರ, ಆಸಕ್ತರ, ಸಾಕ್ಷರತಾ ಕಾರ್ಯಕರ್ತರ ಗಮನ ಸೆಳೆಯುವ ಮೂಲಕ ಜಲಸಾಕ್ಷರತೆಗಾಗಿ ಪ್ರಯತ್ನಿಸುವ ಪುಟ್ಟ ಪ್ರಯತ್ನವನ್ನು ರಾಜ್ಯ ಸಂಪನ್ಮೂಲ ಕೇಂದ್ರ ಕೈಗೆತ್ತಿಕೊಂಡಿದೆ.

ಸಹೃದಯ ಓದುಗರಲ್ಲಿ ನನ್ನ ಕಳಕಳಿಯ ಮನವಿ ಇಷ್ಟೇ. ಈ ಸಾಹಿತ್ಯದ ಮೇಲೆ ನಿಮ್ಮ ಕಣ್ಣೋಟ ಹರಿದಾಗ ಅದು ಓದಿಗಾಗಿ ಓದಾಗಿರದೇ ಕಳಕಳಿಯ ಓದಾಗಿ ಸಾಗಿ ಸ್ವಪ್ರೇರಣೆಯಿಂದ ಪರಿಸರದ ಬಗ್ಗೆ ನಿಮ್ಮಲ್ಲಿ ಪ್ರೀತಿ ಉಕ್ಕಿಸಲಿ. ತನ್ಮೂಲಕ ಜಲಸಂರಕ್ಷಣೆಯಂತಹ ಕಾರ್ಯಕ್ಕೆ ತಾವೆಲ್ಲರೂ ತೊಡಗಿಸಿಕೊಳ್ಳಲಿ ಎಂಬುದೇ ನನ್ನ ಆಸೆ.

ಇನ್ನು ಮುಂದೆ ನಾವು ನಲ್ಲಿಯಿಂದ ಸೋರಿ ಹೋಗುವ ನೀರ ಹನಿಯನ್ನು ನೋಡಿದಾಗ, ಹರಿದು ಹೋಗುವ ಮಳೆನೀರನ್ನು ನೋಡಿದಾಗ, ವ್ಯರ್ಥವಾಗಿ ಹರಿದು ಸಮುದ್ರ ಸೇರಿ ಬಿಡುತ್ತಿರುವ ನೀರನ್ನು ನೋಡಿದಾಗ ನಮ್ಮ ಚಿಂತನೆ ಬೇರೆಯದೇ ಆಗಬೇಕಿದೆ.

ನಾನು ಜಲಸಾಕ್ಷರತೆಗಾಗಿ ಒಂದಷ್ಟು ಕೆಲಸ ಮಾಡಲು ಪ್ರಾರಂಭಿಸಿದಾಗಿನಿಂದ ಹೀಗೆ ಹರಿದು ಹೋಗಿಬಿಡುವ ಮಳೆನೀರು, ನದಿಯಲ್ಲಿ ಪ್ರವಾಹದಿಂದ ತುಂಬಿ ಹರಿದು ಹೋಗುತ್ತಿರುವ ಅಗಾಧ ಪ್ರಮಾಣದ ನೀರನ್ನು ಕಂಡಾಗ ನನ್ನ ಮನಸ್ಸು ಲೆಕ್ಕಾಚಾರದಲ್ಲಿ ತೊಡಗಿಬಿಡುತ್ತದೆ. ಈ ಅಪಾರ ಪ್ರಮಾಣದ ನೀರನ್ನೂ ಬಳಸಿಕೊಳ್ಳಲಾಗುತ್ತಿಲ್ಲವಲ್ಲ ಎಂಬ ಬೇಸರ ಪ್ರಾಮಾಣಿಕವಾಗಿ ಇಣುಕುತ್ತದೆ. ಬಹುಶಃ ನಾನು ಇಂತಹ ಆಲೋಚನೆಯನ್ನೆ ಜಲಪ್ರಜ್ಞೆ ಎಂದೋ, ಜಲಜಾಗೃತಿ ಅಥವಾ ಜಲಸಾಕ್ಷರತೆಯ ಪ್ರಾಥಮಿಕ ಲಕ್ಷಣ ಎಂದೇ ಕರೆಯುತ್ತೇನೆ.

ಈ ಜಲಸಾಕ್ಷರತೆಯ ಲಕ್ಷಣಗಳು ಪ್ರತಿಯೊಬ್ಬರಲ್ಲೂ ಅಂತರ್ಗತವಾಗಿರುತ್ತವೆ ಎಂಬುದು ನನ್ನ ತಿಳುವಳಿಕೆ. ಇದನ್ನು ನೀರೆರೆದು ಪೋಷಿಸಿದಾಗ ಬೆಳೆದು ಹೆಮ್ಮರವಾಗುತ್ತದೆ.

ಎಲ್ಲವನ್ನು 'ಲಾಭ' ಎಂಬುದೇ ನಿರ್ಧಾರ ಮಾಡುವುದಿಲ್ಲ. ಹೀಗಾಗಿ ಮೌಲ್ಯಗಳ ಜೀವಂತಿಕೆ ಉಳಿಸಿಕೊಂಡು ಜೀವನ ಹಸನಾಗಬೇಕಿದೆ. ಪ್ರಕೃತಿ ನಮಗೆ ತಾಯಿಯೂ ಹೌದು. ಮಗುವೂ ಹೌದು. ಅದನ್ನು ನಾವು ಹೇಗೆ ನೋಡುತ್ತೇವೆಯೋ ಹಾಗೆ ಕಾಣುತ್ತದೆ. ತಾಯಿಯಂತೆ ಕಂಡರೆ ಗೌರವಿಸಿ, ಸಂರಕ್ಷಿಸಿ. ಮಗುವಿನಂತೆ ಕಂಡರೆ ಪಾಲನೆ ಪೋಷಣೆ ಮಾಡಿ ಇದು ನಮ್ಮೆಲ್ಲರ ಜವಾಬ್ದಾರಿ ಕೂಡ.

ಈ ಸಾಹಿತ್ಯದಲ್ಲಿ ಕೆಲವು ಲೇಖನಗಳು ಅನುಭವದ ಮೂಸೆಯಿಂದ ಮೂಡಿಬಂದಂತಹವುಗಳಾಗಿದ್ದು ಓದುಗರಲ್ಲಿ ಆಸಕ್ತಿಯನ್ನು ಮೂಡಿಸಬಲ್ಲವು ಎಂಬುದು ನನ್ನ ನಂಬಿಕೆ. ಈ ನಂಬಿಕೆ ನಿಜವಾದಲ್ಲಿ ಈ ಸಾಹಿತ್ಯದ ಪ್ರತಿ ಓದುಗನೂ ಜಲಸಾಕ್ಷರತೆಯ ಹರಿಕಾರನಾಗಿ ನಾಡಿನ ಜಲಸಂರಕ್ಷಣೆಯಾದಿತು ಎಂಬುದು ರಾಜ್ಯ ಸಂಪನ್ಮೂಲ ಕೇಂದ್ರದ ಆಶಯ.

ರಾಜ್ಯ ಸಂಪನ್ಮೂಲ ಕೇಂದ್ರ ಸಾಕ್ಷರತೆಯ ಜೊತೆಗೆ ಜಲಸಾಕ್ಷರತೆಯ ಕೈಂಕರ್ಯವನ್ನು ಕೈಗೆತ್ತಿಕೊಂಡಿದ್ದು 2001ರಂದು. ಆ ವರ್ಷ ಪರಿಸರ ಮಾಲಿಕೆಯಡಿಯಲ್ಲಿ ರಚಿತಗೊಂಡ ನವ ಸಾಕ್ಷರರ ಸಾಹಿತ್ಯಗಳಲ್ಲಿ 'ಮನೆಗೆ ಬಂದ ಮಳೆನೀರು' ಒಂದು ಸಾಹಿತ್ಯವಾಗಿ ಪ್ರಕಟಣೆಗೊಂಡಿತು. ನಂತರ ರಾಜ್ಯ ಸಂಪನ್ಮೂಲ ಕೇಂದ್ರ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ನಾಡಿನ ಸಮಸ್ತ ಜನರ ನೀರಿನ ಬವಣೆಗೆ ಸಾಕ್ಷರತಾ ಕಾರ್ಯಕರ್ತರು ಸ್ಪಂದಿಸಲಿ ಎನ್ನುವ ಆಶಾಭಾವನೆಯನ್ನಿಟ್ಟುಕೊಂಡು ಜಲಸಾಕ್ಷರತೆಯ ಕುರಿತು ಕಾರ್ಯಚಟುವಟಿಕೆಯನ್ನು ಹಮ್ಮಿಕೊಳ್ಳುತ್ತಾ ಬಂತು. ನಂತರ ಛಾವಣಿಮಳೆನೀರು ಸಂಗ್ರಹಣೆ ಮತ್ತು ಬಳಕೆಯ ಪ್ರಾಯೋಗಿಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿತು. ಇದರಿಂದ ಪ್ರಭಾವಿತಗೊಂಡು ಐದು ಜಿಲ್ಲೆಗಳ ಆಯ್ದ ನೋಡಲ್ ಪ್ರೇರಕರಿಗೆ ತರಬೇತಿ ಕಾರ್ಯಕ್ರಮ ಕೈಗೊಂಡಿತು. ಹೀಗೆ ತರಬೇತಿ ಪಡೆದ ಪ್ರೇರಕರಿಗೆ ಹಾಗು ಇತರ ಆಸಕ್ತರಿಗೆ ಜಲಸಾಕ್ಷರತೆ ಕುರಿತು ನಿರಂತರವಾಗಿ ಮಾಹಿತಿ ದಕ್ಕಲಿ ಎನ್ನುವ ಆಶಯವನ್ನಿಟ್ಟುಕೊಂಡು 'ಜಲಸಾಕ್ಷರತೆ' ಎಂಬ ಮಾಸಿಕ ಪತ್ರಿಕೆಯನ್ನು ಪ್ರಾಯೋಗಿಕವಾಗಿ ಪ್ರಕಟಿಸುತ್ತಾ ಬಂದಿದೆ. ಇದು ಜನಸಾಮಾನ್ಯರ ಮನ್ನಣೆ ಗಳಿಸಿ ಇನ್ನು ಹೆಚ್ಚಿನ ಮಟ್ಟದಲ್ಲಿ ಎಲ್ಲರಿಗೂ ನಿಲುಕ ಬೇಕೆಂಬ ಚಿಂತನೆಗಳಿಗೆ ಒತ್ತಾಸೆ ದೊರೆಯುತ್ತಿದೆ.

ಹೀಗೆ 2001ರಲ್ಲಿ ಮೊಳಕೆ ಒಡೆದ ಜಲಸಾಕ್ಷರತೆಯ ಬೀಜ ಕೇಂದ್ರದಲ್ಲಿ ಬೆಳೆಯುತ್ತಾ ಬಂದಿದೆ. ಪ್ರಸ್ತುತ ನಮ್ಮ ಕೇಂದ್ರವು ಜಲಸಾಕ್ಷರತೆ ಎಂಬ ಹೆಸರಿನಲ್ಲಿ ಜಲಸಾಕ್ಷರತೆಯ ವಿವಿಧ ಆಯಾಮಗಳನ್ನು ಕುರಿತಂತೆ ನಾಡಿನ ಹೆಸರಾಂತ ಲೇಖಕರು, ನೀರು ಸಂರಕ್ಷಣೆಯ ತಜ್ಞರುಗಳಿಂದ ನೀರು ಸಂರಕ್ಷಣೆಯ ಬಗ್ಗೆ ಪ್ರಚಲಿತದಲ್ಲಿರುವ ಹಲವು ತಾಂತ್ರಿಕ ವಿವರಗಳನ್ನು ಸಾಧ್ಯವಾದಷ್ಟು ಸರಳವಾಗಿ ಕನ್ನಡ ಭಾಷೆಯಲ್ಲಿ ಬರೆಸಿ ಆಸಕ್ತರಿಗೆ ಮತ್ತು ಸಾಕ್ಷರತಾ ಕಾರ್ಯಕರ್ತರನ್ನು ಈ ಮಹೋನ್ನತ ಕಾರ್ಯದಲ್ಲಿ ತೊಡಗುವಂತೆ ಪ್ರೇರೇಪಿಸುವ ಸಲುವಾಗಿ ಈ ಜಲಸಾಕ್ಷರತೆಯ ಸಾಹಿತ್ಯವನ್ನು ಪ್ರಕಟಿಸುತ್ತಿದೆ.

ಈ ಚಿಂತನೆಗೆ ನೀರೆರೆದು ಪೋಷಿಸಿದ ಖ್ಯಾತ ನೀರು ಸಂರಕ್ಷಣಾ ತಜ್ಞರಾದ ಶ್ರೀಪಡ್ರೆಯವರ ಪ್ರೋತ್ಸಾಹದ ನುಡಿಗಳಿಗಾಗಿ ಅವರನ್ನು ಹಾಗೂ ಜಲಸಾಕ್ಷರತೆ ಸಾಹಿತ್ಯದ ಪ್ರಕಟಣೆಯಲ್ಲಿ ಹೆಜ್ಜೆ ಹೆಜ್ಜೆಗೂ ಸಹಕಾರ ಸಲಹೆ, ಸೂಚನೆಗಳನ್ನು ನೀಡಿದ

ಕಾರ್ಟ್ ಸಂಸ್ಥೆಯ ನಿರ್ದೇಶಕರಾದ ಉ.ನಾ. ರವಿಕುಮಾರ್‌ರವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಮಳೆ ನೀರು ಸಂರಕ್ಷಣೆ ಕೈಂಕರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಾರ್ಥಕ ಸೇವೆ ಸಲ್ಲಿಸುತ್ತಿರುವ ಹಾಗೂ ತಮ್ಮ ಅನುಭವಗಳನ್ನು ಲೇಖನದ ಮೂಲಕ ಈ ಸಾಹಿತ್ಯಕ್ಕೆ ನೀಡಿದ ಜಲಪರಿಣಿತರಾದ ಶ್ರೀ ಕೆ. ನಾರಾಯಣಸ್ವಾಮಿ, ಕೆ.ಸಿ.ಮಂಜುನಾಥ್, ಟಿ.ಎಂ. ಮಂಜುನಾಥ್, ವಿ.ಜಗನ್ನಾಥ್, ಕ್ಷೀರಸಾಗರ್, ಪ್ರೊ॥ ಎಲ್. ಪ್ರಸನ್ನಕುಮಾರ್, ಪ್ರೊ॥ ಶೇಖರ್ ಗೌಳೇರ್, ಇವರುಗಳ ನೆರವನ್ನು ಕೇಂದ್ರ ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತದೆ.

ಜಲಸಾಕ್ಷರತೆಯ ನನ್ನ ಎಲ್ಲಾ ಚಿಂತನೆಗಳು ಮತ್ತು ಕಾರ್ಯಚಟುವಟಿಕೆಗಳಲ್ಲಿ ಸಮಾನವಾಗಿ ಭಾಗವಹಿಸುತ್ತಾ ಈ ಸಾಹಿತ್ಯ ಪ್ರಕಟಣೆ ಕಾರ್ಯಕ್ಕೆ ಜೀವ ತುಂಬಿ ನೆರವಾದ ಹಾಗೂ ಲೇಖನಗಳನ್ನೂ ಎಣೆದು ಕೊಟ್ಟ ನನ್ನ ಸಹೋದ್ಯೋಗಿ ಶ್ರೀ ತುಕಾರಾಮ್ ಎಸ್.ರವರಿಗೆ ನನ್ನ ವಂದನೆಗಳು ಸಲ್ಲುತ್ತವೆ.

ಜಲಸಾಕ್ಷರತೆಯ ಎಲ್ಲಾ ಕಾರ್ಯಚಟುವಟಿಕೆಗಳು ಸುಸೂತ್ರವಾಗಿ ನಡೆದು ಬರಲು ಹಾಗೂ ಅನುಷ್ಠಾನಗೊಳ್ಳಲು ಸಂಸ್ಥೆಯ ಚುಕ್ಕಾಣಿ ಹಿಡಿದು ಮುನ್ನಡೆಸುತ್ತಿರುವ ನಮ್ಮ ಸಂಸ್ಥೆಯ ಅಧ್ಯಕ್ಷರು, ಲೋಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಹಾಗೂ ಕೆ.ಎಸ್.ಎಲ್‌ಎಂ.ಎ. ಸದಸ್ಯ ಕಾರ್ಯದರ್ಶಿಗಳೂ ಆದ ಡಾ॥ ಎನ್.ನಾಗಾಂಬಿಕದೇವಿ ಭಾ.ಆ.ಸೇ. ಇವರಿಗೆ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸ ಬಯಸುವೆ. ಅದರಂತೆ ಹಿಂದಿನಿಂದಲೂ ನಮ್ಮ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದ ರಾಜ್ಯ ಸಂಪನ್ಮೂಲ ಕೇಂದ್ರದ ಮಾಜಿ ಅಧ್ಯಕ್ಷರು ಹಾಗೂ ರಾಜ್ಯದ ಲೋಕಾಯುಕ್ತ ಕಾರ್ಯಪಡೆಯ ನಿರ್ದೇಶಕರು ಆದ ಮಾನ್ಯ ಡಾ॥ ಹೆಚ್. ಸುದರ್ಶನ್ ಇವರಿಗೂ ನನ್ನ ವಂದನೆಗಳು.

'ಜಲಸಾಕ್ಷರತೆ'ಯಂತಹ ಕಾರ್ಯಚಟುವಟಿಕೆಯನ್ನು ಸಂಸ್ಥೆವತಿಯಿಂದ ಕೈಗೊಳ್ಳಲು ಹೆಜ್ಜೆ ಹೆಜ್ಜೆಗೂ ಪ್ರೋತ್ಸಾಹದ ನುಡಿಗಳನ್ನಾಡುತ್ತಾ ಸಾಕ್ಷರತೆಯೊಟ್ಟಿಗೆ ಅಭಿವೃದ್ಧಿಪರ ಚಟುವಟಿಕೆಗಳತ್ತ ನನ್ನ ಆಸಕ್ತಿ ಗರಿಗೆದರುವಂತೆ ಮಾಡಿದ, ಕಳೆದ ಮೂರು ವರ್ಷಗಳಿಂದ ನನ್ನ ಜಲಪರವಾದ ಆಸಕ್ತಿಗೆ ಶಕ್ತಿ ತುಂಬುತ್ತಲೇ ಪ್ರೋತ್ಸಾಹಿಸಿದ ನಮ್ಮ ಸಂಸ್ಥೆ ನಿರ್ದೇಶಕರಾದ ಶ್ರೀ ಕಿಶೋರ್ ಅತ್ತಾವರ್‌ರ ನೆರವನ್ನು ವಿಶೇಷವಾಗಿ ನೆನೆಯುತ್ತೇನೆ. ಅವರ ಸಹಕಾರ ಮುಂದಿನ ದಿನಗಳಲ್ಲಿ ಜಲಸಾಕ್ಷರತೆಯ ಗಿಡ ಹೆಮ್ಮರವಾಗಿ ಬೆಳೆಯಲು ಸಹಕಾರಿಯಾಗುತ್ತದೆಯೆನ್ನುವ ಭಾವನೆಯನ್ನು ಸಹ ಹೊಂದಿದ್ದೇನೆ.

ಹಾಗೆಯೇ ಈ ಸಾಹಿತ್ಯದ ಹಾಗೂ ಜಲಸಾಕ್ಷರತೆಯ ಇತರ ಎಲ್ಲಾ ಕೆಲಸ ಕಾರ್ಯಗಳಲ್ಲಿ ನನಗೆ ಪ್ರೋತ್ಸಾಹದ ನುಡಿಗಳನ್ನಾಡಿ ಉತ್ತೇಜಿಸಿದ ನನ್ನ ಸಂಸ್ಥೆಯ ಎಲ್ಲಾ ಸಹೋದ್ಯೋಗಿಗಳನ್ನು ನೆನೆಯುವುದು ನನ್ನ ಧರ್ಮ.

• ಸಂ

| ಕ್ರಮ ಸಂಖ್ಯೆ | ವಿಷಯ | ಲೇಖಕರು | ಪುಟಸಂಖ್ಯೆ |
|---|---|---|---|
| | ಮೊದಲ ಮಾತು | | III |
| | ಸಂಪಾದಕರ ನುಡಿ | | V |
| 1 | ಜಲ ಸಾಕ್ಷರತೆ | ರಾಜು ಬಿ. | 1 |
| 2 | ಸಾಂಪ್ರದಾಯಿಕ ನೀರು ಸಂರಕ್ಷಣಾ ವಿಧಾನಗಳು | ಕ್ಷೀರಸಾಗರ್ | 15 |
| 3 | ನೀರು ಮತ್ತು ಆರೋಗ್ಯ | ಡಾ. ಮಂಜುನಾಥ್ ಟಿ.ಎಂ. | 33 |
| 4 | ಸಮುದಾಯ ಸಹಭಾಗಿತ್ವ | ಶ್ರೀ ಪಡ್ರೆ | 42 |
| 5 | ಮಳೆ ನೀರಿನ ಸಂಗ್ರಹಣೆ ಮತ್ತು ನಿರ್ವಹಣೆ | ರವಿಕುಮಾರ್ ಉ.ನಾ. | 56 |
| 6 | ಜಲ ಇತಿಹಾಸ | ಪ್ರೊ. ಶೇಖರ್ ಗೌಳೇರ್ | 70 |
| 7 | ಹನಿ ನೀರಿಗೆ ಪಣತೊಟ್ಟು ನಿರಾಳ ತಂದುಕೊಂಡ ಹೆಣ್ಣುಮಕ್ಕಳು | ತುಕಾರಾಮ್ ಎಸ್. | 83 |
| 8 | ಅಂತರ್ಜಲ ಹೆಚ್ಚಿಸುವ ವಿಧಾನಗಳು | ಡಾ\|\| ಪ್ರಸನ್ನಕುಮಾರ್ ಎಸ್. | 101 |
| 9 | ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶಗಳು | ನಾರಾಯಣ ಸ್ವಾಮಿ ಕೆ. | 126 |
| 10 | ನೀರಿನ ಪುನರ್ಬಳಕೆ | ಮಂಜುನಾಥ್ ಕೆ.ಸಿ. | 145 |
| 11 | "ಜಲಪ್ರಜ್ಞೆ" - ತಾಂತ್ರಿಕ ಮಾರ್ಗೋಪಾಯಗಳು | ಜಗನ್ನಾಥ್ ವಿ. | 153 |
| 12 | ವಿದೇಶದಲ್ಲಿ ಮಳೆ ನೀರು ಬಳಕೆ | ರಾಜು ಬಿ. | 163 |
| 13 | ನಂಬಿಕೆ ಹುಟ್ಟಿಸಿದ ಚಿಲುಮೆ | ರಾಜು ಬಿ. | 168 |
| 14 | ಹಂಗಿಲ್ಲದ ಅರಮನೆ - ಯಶಸ್ವಿ ಪ್ರಯೋಗ | ರಾಜು.ಬಿ | 172 |
| 15 | ಭಾವಣಿ ಮಳೆನೀರು ಬಳಕೆ ಸಂಘಟನೆ ಏನು? ಏಕೆ? ಹೇಗೆ? | ತುಕಾರಾಮ್ ಎಸ್. ಮತ್ತು ರಾಜು ಬಿ. | 213 |




ಅರ್ಪಣೆ

ಪರಿಸರ ಸಂರಕ್ಷಣೆ ಮತ್ತು ಜಲಸಂರಕ್ಷಣೆಗಾಗಿ ಜೀವಮಾನವಿಡಿ ದುಡಿದ ಶ್ರೀ ಅನಿಲ್ ಅಗರ್‌ವಾಲ್‌ರ ನೆನಪಿಗೆ